
# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-೫೭೦ ೦೦೬

## ಅಂತಿಮ ಎಂ.ಎ.

## ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ

## ಸ್ವಯಂ ಬೋಧನಾ ಸಾಮಗ್ರಿ




**ಕೋರ್ಸ್ IV: ಪ್ರಚಲಿತ ವಿದ್ಯಮಾನಗಳು ಮತ್ತು ಸಾಮಾಜಿಕ ಚರ್ಚಾವಿಷಯಗಳು**

# ಕರಾಮುವಿ

## ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾನ್ಯತೆ

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಜೂನ್ ೧, ೧೯೯೬ ರಂದು ಸರ್ಕಾರಿ ಅದೇಶ ಸಂಖ್ಯೆ : ED1/UOV/dated 12 February 1996 (Karnataka State Open University Act - 1992) ರ ಪ್ರಕಾರ ಕರ್ನಾಟಕ ರಾಜ್ಯಪಾಲರ ಅನುಮೋದನೆಯೊಂದಿಗೆ ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಗೊಂಡಿತು. ರಾಜ್ಯದ ಶೈಕ್ಷಣಿಕ ಪದ್ಧತಿಯಲ್ಲಿ 'ದೂರ ಶಿಕ್ಷಣ ಪದ್ಧತಿ'ಯನ್ನು ಆರಂಭಿಸುವ ಮತ್ತು ಉತ್ತೇಜಿಸುವ ದೃಷ್ಟಿಯಿಂದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ ೧೯೯೨ ರಂತೆ ಈ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಒಳಗೆ ಸಂಸ್ಥೆಗಳನ್ನು, ಕಾಲೇಜುಗಳನ್ನು, ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ, ನಿರ್ವಹಿಸುವ ಮತ್ತು ಮಾನ್ಯತೆ ಕೊಡುವ ಅಧಿಕಾರವನ್ನು ಹೊಂದಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಹೊರಗಿನ ಸ್ಥಳಗಳಲ್ಲೂ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಅಧಿಕಾರವನ್ನು ಪಡೆದಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು 'ದೂರ ಶಿಕ್ಷಣ ಮಂಡಳಿ' (DEC), ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ನವದೆಹಲಿಯ ಮಾನ್ಯತೆಯನ್ನು ಪಡೆದಿವೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ ನವದೆಹಲಿಯಲ್ಲಿರುವ 'ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ'ದ (AIU) ಖಾಯಂ ಸದಸ್ಯತ್ವವನ್ನು ಹೊಂದಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘ' (ACU), ಲಂಡನ್, ಯುನೈಟೆಡ್ ಕಿಂಗ್‌ಡಮ್‌ನ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ. ಸದಸ್ಯತ್ವದ ಸಂಖ್ಯೆ : ZKASOPENUINI.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಏಷಿಯಾದ ಮುಕ್ತ ವಿಶ್ವವಿದ್ಯಾನಿಲಯಗಳ ಸಂಘ' (AAOU), ಬೀಜಿಂಗ್, ಚೀನಾ – ಇದರ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' (COL) ಕೆನಡ, ಇದರ ಸಹಯೋಗವನ್ನು ೨೦೦೩ ರಿಂದ ಹೊಂದಿದೆ. 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ಎನ್ನುವುದು ದೂರ ಶಿಕ್ಷಣದಲ್ಲಿ ಮುಕ್ತಕಲಿಕಾ ತಿಳಿವಳಿಕೆ, ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಹಂಚುವಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ದೇಶಗಳ ಸರ್ಕಾರಗಳಿಂದ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಸರ್ಕಾರಿ ಸಂಸ್ಥೆಯಾಗಿದೆ.

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ
ಹಾಗು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು 570 006.

ಎಂಎ – ಎಂಸಿಜೆ
ಅಂತಿಮ ವರ್ಷ
ಪತ್ರಿಕೆ 4

## ಕೋರ್ಸ್ 4: ಪ್ರಚಲಿತ ವಿದ್ಯಮಾನಗಳು ಮತ್ತು ಸಾಮಾಜಿಕ ಚರ್ಚಾವಿಷಯಗಳು

**ಬ್ಲಾಕ್ 1 ಪ್ರಚಲಿತ ವಿದ್ಯಮಾನಗಳು**

ಘಟಕ 1. ಅಂತರರಾಷ್ಟ್ರೀಯ ರಾಜಕೀಯ ಸಂಘಟನೆಗಳು 01

2. ಭಾರತೀಯ ರಾಜಕೀಯ ವ್ಯವಸ್ಥೆ 09

3. ಉದಾರೀಕರಣ, ಖಾಸಗೀಕರಣ, ಜಾಗತೀಕರಣ. 17

4. ಮಾಧ್ಯಮದಲ್ಲಿ ಭವಿಷ್ಯಾತ್ಮಕ ಮಾರ್ಗಗಳು 25

5. ಸುಸ್ಥಿರ ಅಭಿವೃದ್ಧಿ ಮತ್ತು ಮಾನವ ಜನಾಂಗ 33

**ಬ್ಲಾಕ್ 2 ಆರ್ಥಿಕ ಚರ್ಚಾವಿಷಯಗಳು**

ಘಟಕ 1. ಆರ್ಥಿಕ ವಿಕಾಸ ಮತ್ತು ಯೋಜನೆ 41

2. ಭ್ರಷ್ಟಾಚಾರ, ಹಗರಣಗಳು ಮತ್ತು ಅಪ್ರಾಮಾಣೀಕತೆ 49

3. ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರ 60

4. ಪರಿಸರ ಮತ್ತು ಕೃಷಿ 70

5. ಭಯೋತ್ಪಾದನೆ ಮತ್ತು ಸೈದ್ಧಾಂತಿಕ ಕಲಹಗಳು 80

**ಬ್ಲಾಕ್ 3 ಗಮನಾತ್ಮಕ ಚರ್ಚಾವಿಷಯಗಳು**

ಘಟಕ 1. ಜನಾಂದೋಲನಗಳು 98

2. ಅಂತರರಾಷ್ಟ್ರೀಯ ವಿವಾದಗಳು 108

3. ಅಂತರರಾಜ್ಯ ಮತ್ತು ಸ್ಥಳೀಯ ವಿವಾದಗಳು 133

4. ಪ್ರಜಾಪ್ರಭುತ್ವ ಮತ್ತು ಚುನಾವಣಾ ವ್ಯವಸ್ಥೆಗಳು 149

5. ಕಮ್ಯುನಿಸಂ ಮತ್ತು ಅಧಿಕಾರ ಅಧಿಪತ್ಯ 168

**ಬ್ಲಾಕ್ 4 ಸಾಮಾಜಿಕ ವಿಷಯಗಳು**

ಘಟಕ 1. ಅನಕ್ಷರತೆ, ಬಡತನ ಮತ್ತು ಶೈಕ್ಷಣಿಕ ಅಗತ್ಯತೆಗಳು 183

2. ಲಿಂಗತ್ವ ತಾರತಮ್ಯ ಮತ್ತು ವಂಚಿತ ಅವಕಾಶಗಳು 193

3. ಅಪರಾಧ, ನ್ಯಾಯಾಂಗ ಮತ್ತು ಮಾನವ ಹಕ್ಕು 208

4. ಸಾರ್ವಜನಿಕ ಆಡಳಿತ ಮತ್ತು ಅಧಿಕಾರಶಾಹಿ ವ್ಯವಸ್ಥೆ 225

5. ಧರ್ಮ ಮತ್ತು ಸಮಾಜ 237

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ


| | |
|---|---|
| **ಪ್ರೊ. ಎಂ. ಜಿ. ಕೃಷ್ಣನ್**<br>ಮಾನ್ಯ ಕುಲಪತಿಗಳು, ಕರಾಮುವಿ, ಮೈಸೂರು | ಅಧ್ಯಕ್ಷರು |
| **ಪ್ರೊ. ಎಸ್. ಎನ್. ವಿಕ್ರಂ ರಾಜ್ ಅರಸ್**<br>ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು | ಸಮಾವೇಶಕರು |
| **ಪ್ರೊ. ಜಿ. ವಿ. ವಿಲಾ ನಿಲಂ**<br>ವಿಶ್ರಾಂತ ಕುಲಪತಿಗಳು, ಕೇರಳ ವಿಶ್ವವಿದ್ಯಾನಿಲಯ, ತಿರುವನಂತಪುರಂ, ಕೇರಳ. | ವಿಷಯ ಪರಿಣತರು |
| **ಪ್ರೊ. ಕೆ. ವಿ. ನಾಗರಾಜ್**<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,<br>ಅಸ್ಸಾಂ ಕೇಂದ್ರಿಯ ವಿಶ್ವವಿದ್ಯಾನಿಲಯ, ಸಿಲ್‌ಚಾರ್, ಅಸ್ಸಾಂ. | ವಿಷಯ ಪರಿಣತರು |
| **ಡಾ. ತೇಜಸ್ವಿ ನವಿಲೂರ್**<br>ಮುಖ್ಯಸ್ಥರು,<br>ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು<br>ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು. | ವಿಷಯ ಪರಿಣತರು |
| **ಶ್ರೀ. ಶೈಲೇಶ್ ರಾಜ್ ಅರಸ್**<br>ಸಹಾಯಕ ಪ್ರಾಧ್ಯಾಪಕರು,<br>ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು<br>ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು. | ವಿಷಯ ಸಂಯೋಜಕರು |



| ಬರಹಗಾರರು | ಘಟಕಗಳು |
|---|---|
| ಬ್ಲಾಕ್ 1 **ಪ್ರೊ. ಕಿರಣ್ ಕುಮಾರ್ ಅನುವಾದಕರು: ಡಾ. ಸತೀಶ್ ಕುಮಾರ್** | **1, 2, 3, 4 ಮತ್ತು 5** |
| ಬ್ಲಾಕ್ 2 **ಪ್ರೊ. ರಾಮಕೃಷ್ಣ** | **1, 2, 3 ಮತ್ತು 4** |
| **ಡಾ. ಎನ್. ಸುಬ್ರಮಣ್ಯ** | **5** |
| **ಅನುವಾದಕರು : ಶ್ರೀ ಎಸ್. ಎಂ. ಬಸವರಾಜು** | **1, 3 ಮತ್ತು 4** |
| **ಡಾ. ಎನ್. ಸುಬ್ರಮಣ್ಯ** | **2 ಮತ್ತು 5** |
| ಬ್ಲಾಕ್ 3 **ಡಾ. ಎನ್. ಸುಬ್ರಮಣ್ಯ** | **1, 2, 3, 4 ಮತ್ತು 5** |
| ಬ್ಲಾಕ್ 4 **ಶ್ರೀ ದೇವಪ್ಪ ಮತ್ತು ಡಾ. ಎನ್. ಸುಬ್ರಮಣ್ಯ** | **1, 4 ಮತ್ತು 5** |
| **ಪ್ರೊ. ಆನಂದ್ ಮತ್ತು ಡಾ. ಎನ್. ಸುಬ್ರಮಣ್ಯ** | **3** |
| **ಡಾ. ವನಜ** | **2** |


## ಪ್ರಕಾಶಕರು


**ಪ್ರೊ. ಪಿ. ಎಸ್. ನಾಯಕ್**
ಕುಲಸಚಿವರು, ಕರಾಮುವಿ, ಮೈಸೂರು 570 006.



ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿದೆ. ಈ ಸ್ವಯಂ ಬೋಧನಾ ಸಾಮಗ್ರಿಯ ಯಾವುದೇ ಭಾಗವನ್ನು ಯಾವುದೇ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಲಿಖಿತ ಅನುಮತಿ ಇಲ್ಲದೆ ಪುನರ್ ಮುದ್ರಿಸುವುದನ್ನು ಹಾಗು ವಿತರಿಸುವುದನ್ನು ಪ್ರತಿಬಂಧಿಸಿದೆ.



**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಡೀನ್ (ಶೈಕ್ಷಣಿಕ), ಮುಕ್ತಗಂಗೋತ್ರಿ, ಮೈಸೂರು 570 006.**

ಮುಖಪುಟ ಪರಿಕಲ್ಪನೆ ಹಾಗು ವಿನ್ಯಾಸ: ಡಾ. ತೇಜಸ್ವಿ ನವಿಲೂರ್.

## ಪರಿಚಯ

ಪ್ರಿಯ ವಿದ್ಯಾರ್ಥಿ,

ಅಂತಿಮ ವರ್ಷದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನಕ್ಕೆ ಸ್ವಾಗತ. ಪ್ರಥಮ ವರ್ಷದ ಅಧ್ಯಯನದಲ್ಲಿ ನೀವು ಮುದ್ರಣ ಮಾಧ್ಯಮ, ಭಾರತದಲ್ಲಿ ಮಾಧ್ಯಮಗಳು, ಸಂವಹನ ಸಿದ್ಧಾಂತ ಹಾಗು ಸಂಶೋಧನೆ, ಮಾಧ್ಯಮ ಧೋರಣೆಗಳು ಹಾಗು ತಂತ್ರಜ್ಞಾನ ಮತ್ತು ಅನ್ವಯಿಕ ಸಂವಹನವನ್ನು ಅಧ್ಯಯನ ಮಾಡಿದ್ದೀರಿ. ಇವುಗಳು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದ ಮೂಲಾಧಾರಗಳು. ಅಂತಿಮ ವರ್ಷದ ಅಧ್ಯಯನವು ಕ್ಷೇತ್ರ ಪರಿಣಿತಿಗೆ ಒತ್ತು ನೀಡುತ್ತದೆ. ಆಧುನಿಕ ಜಗತ್ತಿನ ಸಮೂಹ ಸಂವಹನವು ವಿಶೇಷ ಪ್ರೇಕ್ಷಕರಿಗೆ ಹೆಚ್ಚಿನ ಗಮನ ಹರಿಸಿ ಅವರಿಗೆ ಬೇಕಾಗಿರುವ ಸುದ್ದಿ / ಕಾರ್ಯಕ್ರಮಗಳನ್ನು ಒದಗಿಸುತ್ತಿದ್ದು, ಇದರಿಂದ ವಿವಿಧ ಕ್ಷೇತ್ರದ ಕ್ಷೇತ್ರ ಪರಿಣಿತಿ ಹೆಚ್ಚಿನ ಮಹತ್ವವನ್ನು ಪಡೆಯುತ್ತಿದೆ. ಅಂತಿಮ ವರ್ಷದ ಕೋರ್ಸ್‌ಗಳ ಪರಿಚಯ ಇಂತಿದೆ.

### ಕೋರ್ಸ್ 4: ಪ್ರಚಲಿತ ವಿದ್ಯಮಾನಗಳು ಮತ್ತು ಸಾಮಾಜಿಕ ಚರ್ಚಾವಿಷಯಗಳು

ಜನರ ಜೀವನ ಸುಧಾರಣೆ ಹಾಗು ಜೀವನ ಶೈಲಿಯ ಗುಣಮಟ್ಟವನ್ನು ಸುಧಾರಿಸಿ ಅಭಿವೃದ್ಧಿ ಪಡಿಸುವ ಸಲುವಾಗಿ ದೇಶದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಯೋಜನೆಗಳು ಆಗಾಗ್ಗೆ ಜಾರಿಗೆ ಬರುತ್ತವೆ. ಇಂತಹ ಯೋಜನೆಗಳ ಅರಿವು, ಸಮರ್ಪಕ ಬಳಕೆ, ತನ್ಮೂಲಕ ಜನಗಳ ಉದ್ಧಾರವನ್ನು ಅರ್ಥೈಸಿ ವಿವರಿಸುವ ಪತ್ರಿಕೋದ್ಯಮಕ್ಕೆ ವಿವರಣಾ ಪತ್ರಿಕೋದ್ಯಮ ಎನ್ನುತ್ತಾರೆ. ಪ್ರಚಲಿತ ವಿದ್ಯಮಾನಗಳ ವಿವರಣೆ, ಅರ್ಥೈಸುವಿಕೆಯು ಇಂದು ಅನಿವಾರ್ಯವಾಗಿದೆ. ಜನಾಭಿಪ್ರಾಯ ರೂಪುಗೊಳ್ಳುವುದಕ್ಕೆ ಇದು ಸಹಾಯಕಾರಿ. ಭಯೋತ್ಪಾದನೆ, ಹಗರಣಗಳು, ಭ್ರಷ್ಟಾಚಾರ, ಅಪ್ರಾಮಾಣೀಕತೆ ಮತ್ತು ಸೈದ್ಧಾಂತಿಕ ಕಲಹಗಳ ಮೂಲಕಾರಣಗಳು ಹಾಗು ದೇಶದ ವ್ಯವಸ್ಥೆಗೆ ಆಗುವ ನಷ್ಟವನ್ನು ವಿವರಿಸುವ ಕೆಲಸ ಬಹಳ ಜವಾಬ್ದಾರಿಯುಳ್ಳದ್ದು.

ಇದರೊಂದಿಗೆ ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಪರಿಸರ ಮತ್ತು ಕೃಷಿ ಜೊತೆಗೆ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ಮಹತ್ವವನ್ನು ತಿಳಿಸುವ ಕೆಲಸವು ಅಗತ್ಯ. ದೇಶದ ಎಲ್ಲ ಆಗುಹೋಗುಗಳಿಗೆ ಸಮಾಜವೇ ಕೇಂದ್ರ ಬಿಂದುವಾಗಿದ್ದು ಅನಕ್ಷರತೆ, ಬಡತನ, ಶಿಕ್ಷಣ, ಲಿಂಗತಾರತಮ್ಯ, ವಂಚಿತ ಅವಕಾಶಗಳು, ಅಧಿಕಾರಶಾಹಿ, ವ್ಯವಸ್ಥೆ, ಧಾರ್ಮಿಕ ಆಚರಣೆ ಮುಂತಾದವುಗಳ ಬಗೆಗೂ ಪತ್ರಿಕೋದ್ಯಮ ಗಮನಹರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಿವರಣಾ ಪತ್ರಿಕೋದ್ಯಮ ಮಹತ್ವ ಪಡೆಯುತ್ತದೆ.

ಪ್ರಚಲಿತ ವಿದ್ಯಮಾನಗಳು ಮತ್ತು ಸಾಮಾಜಿಕ ಚರ್ಚಾ ವಿಷಯಗಳು ಕೋರ್ಸ್‌ನಲ್ಲಿ ಪ್ರಚಲಿತ ವಿದ್ಯಮಾನಗಳು, ಆರ್ಥಿಕ ಚರ್ಚಾ ವಿಷಯಗಳು, ಗಮನಾತ್ಮಕ ಚರ್ಚಾ ವಿಷಯಗಳು ಹಾಗು ಸಾಮಾಜಿಕ ವಿಷಯಗಳ ಬಗ್ಗೆ ಅಧ್ಯಯನ ಮಾಡುತ್ತೀರಿ.

ಶುಭ ಹಾರೈಕೆಗಳೊಂದಿಗೆ,

**ಮುಖ್ಯಸ್ಥರು**
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ
ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮೈಸೂರು.

# ಘಟಕ 1 : ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳು

ರಚನೆ :

1.0. ಧ್ಯೇಯಗಳು

1.1. ಪ್ರಸ್ತಾವನೆ

1.2. ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ವ್ಯಾಪ್ತಿ ಮತ್ತು ರಚನೆ

1.2.1. ವಿಶ್ವಸಂಸ್ಥೆ

1.2.2. ದಿ ಅರಬ್ ಲೀಗ್

1.2.3. ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ ( A SEAN)

1.2.4. ಸ್ವತಂತ್ರ ದೇಶಗಳ ಕಾಮನ್‌ವೆಲ್ತ್

1.2.5. ಕಾಮನ್‌ವೆಲ್ತ್

1.2.6. ಯೂರೋಪಿಯನ್ ಪರಿಷತ್

1.2.7. ಯೂರೋಪಿಯನ್ ಒಕ್ಕೂಟ

1.2.8. 'ಜಿ.8' ಶೃಂಗಸಭೆ

1.2.9. ಆಫ್ರಿಕನ್ ಒಕ್ಕೂಟ

1.2.10. ಇಸ್ಲಾಮಿಕ್ ಕಾನ್ಫರೆನ್ಸ್ ಸಂಘಟನೆ

1.2.11. ಅಲಿಪ್ತ ಚಳುವಳಿ

1.2.12. ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಘ (ಸಾರ್ಕ್) (SAARC)

1.3. ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ಭವಿಷ್ಯ

1.4. ಸಾರಾಂಶ

1.5. ನಿಮ್ಮ ಪ್ರಗತಿ ಪರಿಶೀಲನೆ

1.6. ಹೆಚ್ಚಿನ ಓದಿಗಾಗಿ

## 1.0. ಉದ್ದೇಶಗಳು

ಅಂತರಾಷ್ಟ್ರೀಯ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಮಾನವೀಯ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಎರಡನೇ ಮಹಾಯುದ್ಧದ ಮುಕ್ತಾಯವು ಅನೇಕ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ಹುಟ್ಟು ಹಾಗೂ ಬೆಳವಣಿಗೆಗೆ ನಾಂದಿ ಹಾಡಿತು. ವಿಶ್ವಸಂಸ್ಥೆಯಂತಹ ಅಂತಾರಾಷ್ಟ್ರೀಯ ಸಂಘಟನೆಗಳಿಗೆ ವಿಶ್ವದಾದ್ಯಂತ ಸದಸ್ಯ ರಾಷ್ಟ್ರಗಳಿದ್ದರೆ, ಯೂರೋಪಿಯನ್ ಒಕ್ಕೂಟ ಮತ್ತು ಸಾರ್ಕ್(SAARC) ನಂತಹ ಪ್ರಾದೇಶಿಕ ರಾಜಕೀಯ ಸಂಘಟನೆಗಳು ತಮ್ಮ ಸದಸ್ಯ ರಾಷ್ಟ್ರಗಳೊಳಗೆ ಪ್ರಾದೇಶಿಕ ಸಹಕಾರ ಸಾಧಿಸುವ ಉದ್ದೇಶ ಹೊಂದಿವೆ. ಈ ಘಟಕದಲ್ಲಿ ನೀವು ಮುಂದಿನ ವಿಷಯಗಳನ್ನು ಅಧ್ಯಯನ ಮಾಡುತ್ತೀರಿ.

- ಅಂತರಾಷ್ಟ್ರೀಯ ರಾಜಕೀಯ ಸಂಘಟನೆಗಳ ಉಗಮ ಮತ್ತು ವಿಕಾಸ
- ವಿವಿಧ ಅಂತರಾಷ್ಟ್ರೀಯ ರಾಜಕೀಯ ಸಂಘಟನೆಗಳು
- ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ವ್ಯಾಪ್ತಿ ಮತ್ತು ರಚನೆ ಹಾಗೂ
- ಅಂತರಾಷ್ಟ್ರೀಯ ರಾಜಕೀಯ ಸಂಘಟನೆಗಳ ಭವಿಷ್ಯ

## 1.1. ಪ್ರಸ್ತಾವನೆ

ಎರಡನೇ ಮಹಾಯುದ್ಧ ಮುಕ್ತಾಯದ ನಂತರ 60ಕ್ಕೂ ಹೆಚ್ಚು ವರ್ಷಗಳು ಕಳೆದಿವೆ. ಅನೇಕ ದೇಶಗಳು ವಸಾಹತುಶಾಹಿ ಆಡಳಿತದಿಂದ ಮುಕ್ತವಾಗಿವೆ ಮತ್ತು ರಾಜಕೀಯ ಬಂಧ ವಿಮೋಚನೆಯ ಹೊಸ ಯುಗವನ್ನು ಪ್ರವೇಶಿಸಿವೆ. ಎರಡನೇ ಮಹಾಯುದ್ಧದ ನಂತರ ವಿಶ್ವಸಂಸ್ಥೆಯಂತಹ ಬಹು ಆಯಾಮಗಳ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳು ಹುಟ್ಟಿಕೊಂಡವು. ಅವು ಯುದ್ಧದ ತೊಂದರೆ ಅನುಭವಿಸಿದ ಯೂರೋಪಿನ ರಾಷ್ಟ್ರಗಳಿಗೆ ಹಣ ಮತ್ತು ವಿಚಾರ ಎರಡೂ ದೃಷ್ಟಿಯಿಂದಲೂ ಅಭಿವೃದ್ಧಿ ಸಹಕಾರ ನೀಡಿದವು. ಅನಂತರ ಯುದ್ಧಾನಂತರದ ವರ್ಷಗಳಲ್ಲಿ ಅಂದರೆ 1950 ಮತ್ತು 1960 ದಶಕಗಳಲ್ಲಿ ವಿಶ್ವಸಂಸ್ಥೆ ಮತ್ತು ಅದರ ಕಾರ್ಯಕಾರಿ ಸಂಸ್ಥೆಗಳು ಅಭಿವೃದ್ಧಿ ಸಹಕಾರ ಮತ್ತು ಪರಿಹಾರ ಕಾರ್ಯ ಒದಗಿಸುವ ಉದ್ದೇಶದಿಂದ ತಮ್ಮ ಗಮನವನ್ನು ಹೊಸದಾಗಿ ಸ್ವತಂತ್ರಗೊಂಡ ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳತ್ತ ಹರಿಸಿದವು.

ಇತ್ತೀಚಿನ ವರ್ಷಗಳಲ್ಲಿ ಅಂತರಾಷ್ಟ್ರೀಯ ರಾಜಕೀಯ ಸಂಘಟನೆಗಳು ಸಮಾನ ಮೌಲ್ಯಗಳು ಮತ್ತು ಆಸಕ್ತಿಗಳನ್ನು ಹಂಚಿಕೊಳ್ಳುವ ರಾಷ್ಟ್ರಗಳ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುವಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಉತ್ತಮವಾದ ಅಂತಾರಾಷ್ಟ್ರೀಯ ಅರಿವು ಮತ್ತು ಸಹಕಾರವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳು ಅಭಿವೃದ್ಧಿ ಕ್ಷೇತ್ರಗಳ ವಿಶಾಲ ವ್ಯಾಪ್ತಿಯನ್ನು ಪ್ರವೇಶಿಸಿವೆ. ಅಲ್ಲದೆ ಅವು ವಿವಿಧ ಸದಸ್ಯ ರಾಷ್ಟ್ರಗಳ ನಡುವೆ ಶಾಂತಿ ಮತ್ತು ಭದ್ರತೆಯನ್ನು ಪ್ರೋತ್ಸಾಹಿಸುವಲ್ಲಿಯೂ ಗಮನ ಹರಿಸಿವೆ. ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಸಹಕಾರ ಮತ್ತು ಅರಿವು ಉತ್ತಮ ಪಡಿಸುವ ಉದ್ದೇಶದಿಂದ ವಿಶ್ವ ನಾಯಕರು ಮಾತಾಡಲು ಹಾಗೂ ಕಾರ್ಯತತ್ಪರರಾಗಲು ಈ ಸಂಘಟನೆಗಳು ಪ್ರಮುಖ ವೇದಿಕೆಗಳಾಗಿ ಪರಿಣಮಿಸಿವೆ.

## 1.2. ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ವ್ಯಾಪ್ತಿ ಮತ್ತು ರಚನೆ

ವಿಶ್ವಸಂಸ್ಥೆಯು ಅತಿ ದೊಡ್ಡ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಯಾಗಿದೆ. ಇದರಲ್ಲಿ 18 ಸ್ವತಂತ್ರ ವಿಶೇಷ ಸಂಸ್ಥೆಗಳಿರುವುದಲ್ಲದೆ, ಅಭಿವೃದ್ಧಿ ಶೀಲ ರಾಷ್ಟ್ರಗಳ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಸಂಬಂಧಿಸಿದ 14 ಪ್ರಮುಖ ವಿಶ್ವಸಂಸ್ಥೆ ಕಾರ್ಯಕ್ರಮಗಳು ಮತ್ತು ನಿಧಿಗಳಿವೆ.

- ವಿಶ್ವಸ್ಥ ಮಂಡಳಿ

ವಿಶ್ವಸಂಸ್ಥೆಯ ನಿಯಮಾವಳಿಯು ಪರಿಪೂರ್ಣ ಸ್ವಯಂ ಆಡಳಿತ ಹೊಂದಿರದ ಪ್ರಾಂತ್ಯಗಳ ನಿವಾಸಿಗಳ ಹಿತಾಸಕ್ತಿಯನ್ನು ಕಾಪಾಡಲು ಅಂತಾರಾಷ್ಟ್ರೀಯ ವಿಶ್ವಸ್ಥ ವ್ಯವಸ್ಥೆಯನ್ನು ಒದಗಿಸುತ್ತದೆ. ಅದನ್ನು ವ್ಯಕ್ತಿಗತ ವಿಶ್ವಸ್ಥ ಒಪ್ಪಂದಗಳ ಮೂಲಕ ಸ್ಥಾಪಿಸಬಹುದು. ಅವುಗಳನ್ನು ವಿಶ್ವಸ್ಥ ಪ್ರಾಂತ್ಯಗಳೆಂದು ಕರೆಯಲಾಗುತ್ತದೆ. ಎಲ್ಲಾ ಮೂಲ ವಿಶ್ವಸ್ಥ ಪ್ರಾಂತ್ಯಗಳು ಸ್ವತಂತ್ರಗೊಂಡಿವೆ ಅಥವಾ ಸ್ವತಂತ್ರ ರಾಷ್ಟ್ರಗಳನ್ನು ಸೇರಿವೆ. ಚೀನಾ, ಫ್ರಾನ್ಸ್, ರಷ್ಯಾ, ಇಂಗ್ಲೇಂಡ್ ಮತ್ತು ಅಮೆರಿಕಾ ವಿಶ್ವಸ್ಥ ಮಂಡಳಿಯ ಸದಸ್ಯರಾಷ್ಟ್ರಗಳಾಗಿವೆ.

- ಆರ್ಥಿಕ ಮತ್ತು ಸಾಮಾಜಿಕ ಮಂಡಳಿ

ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯು 54 ಸದಸ್ಯರನ್ನು ಒಳಗೊಂಡಿದೆ. ಇದು ಸಾಮಾನ್ಯ ಸಭೆ ನಿರ್ದೇಶನದಂತೆ ಅಂತಾರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಮತ್ತು ಇತರ ಸಂಬಂಧ ಪಟ್ಟ ವಿಶ್ವಸಂಸ್ಥೆಯ ಕಾರ್ಯಗಳನ್ನು ಜಾರಿಗೆ ತರುವ ಜವಾಬ್ದಾರಿ ಹೊಂದಿದೆ. ಈ ಮಂಡಳಿಯಲ್ಲಿ ಪ್ರಾದೇಶಿಕ ಆರ್ಥಿಕ ಆಯೋಗಗಳಿವೆ. ಅವುಗಳೆಂದರೆ ಜಿನಿವಾದಲ್ಲಿರುವ ಯೂರೋಪ್ ಆರ್ಥಿಕ ಆಯೋಗ, ಬ್ಯಾಂಕಾಕ್‌ನಲ್ಲಿರುವ ಏಷ್ಯಾ ಫೆಸಿಫಿಕ್ ಆರ್ಥಿಕ ಮತ್ತು ಸಾಮಾಜಿಕ ಆಯೋಗ, ಚಿಲಿಯ ಸ್ಯಾಂಟಿಯಾಗೊದಲ್ಲಿರುವ ಲ್ಯಾಟಿನ್ ಅಮೆರಿಕಾ ಮತ್ತು ಕೆರಿಬಿಯನ್ ರಾಷ್ಟ್ರಗಳ ಆರ್ಥಿಕ ಆಯೋಗ, ಅದಿಸ್ ಅಬಾಬದಲ್ಲಿರುವ ಆಫ್ರಿಕಾ ಆರ್ಥಿಕ ಆಯೋಗ ಮತ್ತು ಜೋರ್ಡಾನ್‌ನ ಅಮ್ಮಾನ್ ನಲ್ಲಿರುವ ಪಶ್ಚಿಮ ಏಷ್ಯಾ ಆರ್ಥಿಕ ಆಯೋಗ.

- ಅಂತಾರಾಷ್ಟ್ರೀಯ ನ್ಯಾಯಾಲಯ

ಅಂತಾರಾಷ್ಟ್ರೀಯ ನ್ಯಾಯಾಲಯವು ಒಂದು ಅಂತರಾಷ್ಟ್ರೀಯ ಒಪ್ಪಂದದಿಂದ ರಚಿಸಲ್ಪಟ್ಟಿದೆ. ಈ ನ್ಯಾಯಾಲಯ ಕಾಯಿದೆಯು ವಿಶ್ವಸಂಸ್ಥೆಯ ಒಂದು ಅಂತರ್ಗತ ಭಾಗವಾಗಿದೆ. ವಿಶ್ವಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳು ಈ ನ್ಯಾಯಾಲಯ ಕಾಯಿದೆಗೆ ತಲೆಬಾಗಬೇಕು. ಇದರಲ್ಲಿ 15 ನ್ಯಾಯಧೀಶರಿದ್ದು, ಇದರ ಕೇಂದ್ರ ಕಛೇರಿ ನೆದರ್‌ಲ್ಯಾಂಡ್ಸ್‌ನಲ್ಲಿದೆ.

- ಸಚಿವಾಲಯ (ಸೆಕ್ರೆಟೇರಿಯಟ್)

ಸಚಿವಾಲಯದಲ್ಲಿ ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಇದ್ದು, ಅವರು ವಿಶ್ವಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಯಾಗಿರುತ್ತಾರೆ. ಅಲ್ಲದೆ ಸಾಮಾನ್ಯ ಸಭೆಯ ನಿಯಮಾವಳಿಗಳಂತೆ ಅವರಿಂದ ನೇಮಕಗೊಂಡ ಒಬ್ಬ ಅಂತರಾಷ್ಟ್ರೀಯ ನೌಕರನಿರುತ್ತಾನೆ. ಇದರ ಕೇಂದ್ರ ಕಚೇರಿ ನ್ಯೂಯಾರ್ಕ್‌ನಲ್ಲಿದೆ. ವಿಶ್ವಸಂಸ್ಥೆಯಲ್ಲದೆ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಪ್ರಮುಖ ಪಾತ್ರವಹಿಸುವ ಮತ್ತು ಆರ್ಥಿಕ ಮತ್ತು ಬಹು ಪ್ರಾದೇಶಿಕ ಸಹಕಾರ ಪ್ರೋತ್ಸಾಹಿಸುವ ಅನೇಕ ಪ್ರಾದೇಶಿಕ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳಿವೆ.

## 1.2.2. ಅರಬ್ ಲೀಗ್

ಅರಬ್‌ಲೀಗ್ ಅನ್ನು ಅರಬ್ ರಾಷ್ಟ್ರಗಳ ಲೀಗ್ ಎಂದು ಕೂಡಾ ಕರೆಯುತ್ತಾರೆ. ಇದು ಮಧ್ಯ ಪೂರ್ವ ಮತ್ತು ಉತ್ತರ ಆಫ್ರಿಕಾದ ಅರಬ್ ರಾಷ್ಟ್ರಗಳ ಪ್ರಾದೇಶಿಕ ಸಂಘಟನೆಯಾಗಿದೆ. ಇದು ಮಾರ್ಚ್ 22, 1945ರಲ್ಲಿ ಕೈರೋದಲ್ಲಿ ರಚನೆಯಾಯಿತು. ಮೊದಲ ಮಹಾಯುದ್ಧದಲ್ಲಿ ಒಟ್ಟೋಮನ್ ಸಾಮ್ರಾಜ್ಯ ನಾಶವಾದ ನಂತರ ಅರಬರಲ್ಲಿ ಉಂಟಾದ ರಾಷ್ಟ್ರೀಯ ಜಾಗೃತಿಯ ಪ್ರತಿಫಲವೇ ಈ ಸಂಘಟನೆ. ಆರಂಭದಲ್ಲಿ ಏಳು ರಾಷ್ಟ್ರಗಳಿಂದ ಲೀಗ್ ರಚನೆಯಾಯಿತು. ಇದರ ಮುಖ್ಯ ಗುರಿಗಳು ಸದಸ್ಯ ರಾಷ್ಟ್ರಗಳ ನಡುವೆ ಆತ್ಮೀಯ ಸಂಬಂಧ ಬೆಳೆಸುವುದು ಮತ್ತು ಅವುಗಳ ನಡುವೆ ಸಹಕಾರ ಬೆಳೆಸುವುದು, ಅವುಗಳ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ ಕಾಪಾಡುವುದು ಹಾಗೂ ಅರಬ್ ರಾಷ್ಟ್ರಗಳ ವಿದ್ಯಾಮಾನಗಳು ಮತ್ತು ಹಿತಾಸಕ್ತಿಗಳನ್ನು ಪರಿಗಣಿಸುವುದಾಗಿದೆ. ಅರಬ್ ಲೀಗ್ ಏಕ ಅರಬ್ ರಾಷ್ಟ್ರೀಯ

ವಾದವನ್ನು ಬೆಂಬಲಿಸುವ ಮತ್ತು ಪ್ರೋತ್ಸಾಹಿಸುವ ತತ್ವಗಳ ಆಧಾರದ ಮೇಲೆ ನಿಂತಿದೆ. ವಿವಿಧ ವಿಷಯಗಳಲ್ಲಿ ಅರಬ್ ರಾಷ್ಟ್ರಗಳಲ್ಲಿ ಇದಕ್ಕೆ ಪ್ರಮುಖ ಸ್ಥಾನವಿದೆ. ಇದರ ಕೇಂದ್ರ ಕಚೇರಿ ಈಜಿಪ್ಟ್‌ನಲ್ಲಿದೆ.

ಲೀಗ್ ಮಂಡಳಿಯಲ್ಲಿ ಪ್ರತಿಯೊಬ್ಬ ಸದಸ್ಯರಿಗೆ ಒಂದು ಮತ ಚಲಾಯಿಸುವ ಅವಕಾಶವಿದೆ. ಯಾವುದೇ ನಿರ್ಧಾರ ತೆಗೆದುಕೊಂಡರೂ ಅದರ ಪರವಾಗಿ ಮತ ಚಲಾಯಿಸಿದ ಸದಸ್ಯರು ಪಾಲಿಸಬೇಕು. 1945ರಲ್ಲಿ ಲೀಗ್‌ನ ಉದ್ದೇಶಗಳು ಸದಸ್ಯ ರಾಷ್ಟ್ರಗಳ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಬಲಪಡಿಸುವುದು ಮತ್ತು ಸಂಯೋಜಿಸುವುದು ಹಾಗೂ ಸದಸ್ಯ ರಾಷ್ಟ್ರಗಳ ನಡುವಿನ ಅಥವಾ ಸದಸ್ಯ ರಾಷ್ಟ್ರಗಳು ಮತ್ತು ಇತರ ರಾಷ್ಟ್ರಗಳ ನಡುವಿನ ವಿವಾದಗಳನ್ನು ಬಗೆಹರಿಸಲು ಸಂಧಾನ ನಡೆಸುವುದಾಗಿತ್ತು. ಅರಬ್ ಲೀಗ್ ಅಮೆರಿಕನ್ ರಾಷ್ಟ್ರಗಳ ಸಂಘಟನೆ, ಯೂರೋಪ್ ಮಂಡಳಿ ಮತ್ತು ಆಫ್ರಿಕನ್ ಒಕ್ಕೂಟಗಳನ್ನು ಪ್ರತಿಬಿಂಬಿಸುತ್ತದೆ. ಅವುಗಳಂತೆ ಇದಕ್ಕೂ ಮೂಲತಃ ರಾಜಕೀಯ ಗುರಿಗಳಿದ್ದವು. ಇಂತಹ ಪ್ರತಿಯೊಂದು ಸಂಘಟನೆಯನ್ನು ವಿಶ್ವಸಂಸ್ಥೆಯ ಪ್ರಾದೇಶಿಕ ಆವೃತ್ತಿ ಎನ್ನಬಹುದು. ಆದಾಗ್ಯೂ ಇದರ ಸದಸ್ಯತ್ವ ಪ್ರಾದೇಶಿಕ ವ್ಯಾಪ್ತಿಯ ಬದಲಾಗಿ ಸಂಸ್ಕೃತಿ ಆಧಾರಿತವಾಗಿದೆ. ಅದು ಮೇಲಿನ ಇತರ ಸಂಘಟನೆಗಳ ಸದಸ್ಯತ್ವಕ್ಕೂ ಆಧಾರವಾಗಿದೆ. ಈ ವಿಷಯದಲ್ಲಿ ಅರಬ್ ಲೀಗ್ ಲ್ಯಾಟಿನ್ ಯೂನಿಯನ್‌ನಂತಹ ಸಂಘಟನೆಗಳನ್ನು ನೆನಪಿಗೆ ತರುತ್ತದೆ.

ಅಲ್ಜೀರಿಯಾ, ಬಹರೇನ್, ಕೊಮರೋಸ್, ಜಿಬೇತಿ, ಈಜಿಪ್ಟ್, ಇರಾಕ್, ಜೋರ್ಡಾನ್, ಕುವೈತ್, ಲೆಬನಾನ್, ಲಿಬಿಯಾ, ಮೌರಿಟೇನಿಯಾ, ಮೊರಕ್ಕೊ, ಓಮನ್, ಪ್ಯಾಲಸ್ತೇನ್, ಕತಾರ್, ಸೌದಿ ಅರೇಬಿಯಾ, ಸುಡಾನ್, ಸೊಮಾಲಿಯಾ, ಸಿರಿಯಾ, ತುನಿಸಿಯಾ, ಅರಬ್ ಸಂಯುಕ್ತ ಒಕ್ಕೂಟ, ಯೇಮನ್ ಅರಬ್‌ಲೀಗ್‌ನ ಸದಸ್ಯ ರಾಷ್ಟ್ರಗಳಾಗಿವೆ. ಇದರ ಮೇಲೆ ಗಮನಹರಿಸುವ ಸ್ಥಾನಮಾನ ಹೊಂದಿರುವ ರಾಷ್ಟ್ರಗಳೆಂದರೆ ಎರಿಟ್ರಿಯಾ ಮತ್ತು ಭಾರತ. ಅರಬ್‌ಲೀಗ್‌ನ ಎಲ್ಲಾ ಸದಸ್ಯರು ಇಸ್ಲಾಮಿಕ್ ಕಾನ್ಫರೆನ್ಸ್ ಸಂಘಟನೆಯ ಸದಸ್ಯರೂ ಕೂಡಾ ಆಗಿವೆ. ಅರಬ್ ಮ್ಯಾಘ್ರೆಬ್ ಒಕ್ಕೂಟ ಸಂಘಟನೆಗಳು ಅರಬ್ ಲೀಗ್‌ನ ಉಪಭಾಗಗಳಾಗಿವೆ. ಅರಬ್‌ಲೀಗ್ ಯೂರೋಪಿಯನ್ ಒಕ್ಕೂಟದಂತಹ ಕೆಲವು ಪ್ರಾದೇಶಿಕ ಸಂಘಟನೆಗಳಿಂದ ಪ್ರಮುಖ ವ್ಯತ್ಯಾಸ ಹೊಂದಿದೆ. ಇದು ಪ್ರಾದೇಶಿಕ ಏಕತೆ ಸಾಧಿಸುವಲ್ಲಿ ಸಫಲವಾಗಿಲ್ಲ ಮತ್ತು ಈ ಸಂಘಟನೆಗೆ ತನ್ನ ಸದಸ್ಯ ರಾಷ್ಟ್ರಗಳ ಪ್ರಜೆಗಳ ಜೊತೆ ಯಾವುದೇ ನೇರ ಸಂಬಂಧವಿರುವುದಿಲ್ಲ.

## 1.2.3. ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ (ASIAN)

ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘವು ಇಂಡೋನೇಷಿಯಾ, ಮಲೇಶ್ಯಾ, ಫಿಲಿಫೈನ್ಸ್, ಸಿಂಗಾಪುರ ಮತ್ತು ಥೈಲ್ಯಾಂಡ್ ರಾಷ್ಟ್ರಗಳ ಸರಕಾರಗಳಿಂದ ರಚಿಸಲ್ಪಟ್ಟ ಒಂದು ಪ್ರಾದೇಶಿಕ ಸಂಘಟನೆಯಾಗಿದೆ. ಆಗಸ್ಟ್ 8, 1967ರಲ್ಲಿ ಅಸಿಯಾನ್ ರಾಷ್ಟ್ರಗಳ ವಿದೇಶಿ ಸಚಿವರುಗಳು ಬ್ಯಾಂಕಾಕ್ ಘೋಷಣೆಗೆ ಸಹಿ ಮಾಡುವುದರ ಮೂಲಕ ಈ ಸಂಘಟನೆ ಅಸ್ತಿತ್ವಕ್ಕೆ ಬಂತು. ಇದರ ಉದ್ದೇಶ ಆಗ್ನೇಯ ಏಷ್ಯಾದಲ್ಲಿ ಆರ್ಥಿಕ ಪ್ರಗತಿ ಹೆಚ್ಚಿಸುವುದು ಮತ್ತು ಆರ್ಥಿಕ ಭದ್ರತೆ ಕಾಪಾಡುವುದಾಗಿದೆ. ಮೇಲಿನ ಸದಸ್ಯ ರಾಷ್ಟ್ರಗಳಲ್ಲದೆ ಬ್ರುನೇಯಿ, ಕಾಂಬೋಡಿಯಾ, ಲಾವೋಸ್, ಮಯನ್ಮಾರ್ ಮತ್ತು ವಿಯೆಟ್ನಾಂ ಕೂಡಾ ಸದಸ್ಯ ರಾಷ್ಟ್ರಗಳಾಗಿವೆ. ಇವರ ಕೇಂದ್ರ ಕಚೇರಿ ಇಂಡೋನೇಶಿಯಾದಲ್ಲಿದೆ.

## 1.2.4 ಸ್ವತಂತ್ರ ರಾಷ್ಟ್ರಗಳ ಕಾಮನ್‌ವೆಲ್ತ್

ಸ್ವತಂತ್ರ ರಾಷ್ಟ್ರಗಳ ಕಾಮನ್‌ವೆಲ್ತ್ ಸೋವಿಯತ್ ಒಕ್ಕೂಟವನ್ನು ಒಡೆದು 1991ರ ಡಿಸೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂತು. ಇದರಲ್ಲಿ ಹಳೆಯ ಸೋವಿಯತ್ ಒಕ್ಕೂಟದ 15 ರಾಷ್ಟ್ರಗಳಲ್ಲಿ 12 ರಾಷ್ಟ್ರಗಳು ಸದಸ್ಯತ್ವ ಪಡೆದಿವೆ. ಅರ್ಮೇನಿಯಾ, ಅಜೆರ್‌ಬೈಜಾನ್, ಬೆಲಾರುಸ್, ಜಾರ್ಜಿಯಾ, ರಜರಸ್ತಾನ್, ಕಿಜಿನಸ್ತಾನ್, ಮಾಲ್ಡೋವಾ, ರಷ್ಯಾ, ತಜಕಿಸ್ತಾನ್, ತರ್ಕ್‌ಮೆನಿಸ್ತಾನ್, ಉಕ್ರೇನ್ ಮತ್ತು ಉಜ್ಬೆಕಿಸ್ತಾನ್ ಇದರ ಸದಸ್ಯ ರಾಷ್ಟ್ರಗಳಾಗಿವೆ. ಕಾಮನ್‌ವೆಲ್ತ್‌ನ ರಾಜಧಾನಿ ಬೆಲಾರುಸ್‌ನ ಮಿನ್‌ಸ್ಕ ಆಗಿದೆ.

## 1.2.3. ಕಾಮನ್‌ವೆಲ್ತ್

ಇದೊಂದು ಹಳೆಯ ಬ್ರಿಟೀಷ್ ಸಾಮ್ರಾಜ್ಯದ ಭಾಗಗಳಾಗಿದ್ದ ರಾಷ್ಟ್ರಗಳ ಸಂಘಟನೆಯಾಗಿದೆ. ಇದರಲ್ಲಿ 54 ಸದಸ್ಯ ರಾಷ್ಟ್ರಗಳಿವೆ. ಬ್ರಿಟೀಷ್ ರಾಜಪ್ರಭುತ್ವ ಕಾಮನ್‌ವೆಲ್ತ್‌ನ ಸಾಂಕೇತಿಕ ಅಧ್ಯಕ್ಷತೆ ವಹಿಸಿದೆ. ಇದರ ಕೇಂದ್ರ ಕಚೇರಿ ಲಂಡನ್‌ನಲ್ಲಿದೆ.

## 1.2.6. ಯೂರೋಪಿಯನ್ ಪರಿಷತ್

1994ರಲ್ಲಿ ಯುರೋಪ್ ಕಾಂಗ್ರೆಸ್ ಒಂದು ಯುರೋಪಿಯನ್ ಸಭೆ ಸೇರಿದಂತೆ ಸಂಯುಕ್ತ ಯುರೋಪ್‌ನ ರಚನೆಗೆ ಕರೆ ನೀಡಿತು. ಈ ಪ್ರಸ್ತಾವನೆ ಯುರೋಪಿಯನ್ ಪರಿಷತ್‌ನ ಉಗಮವಾಗಿದೆ. ಇದರಲ್ಲಿ 24 ಸದಸ್ಯ ರಾಷ್ಟ್ರಗಳಿವೆ. ಇದರ ಕೇಂದ ಕಛೇರಿ ಫ್ರಾನ್ಸ್‌ನಲ್ಲಿದೆ.

## 1.2.7. ಯುರೋಪಿಯನ್ ಒಕ್ಕೂಟ

ಯುರೋಪಿಯನ್ ಒಕ್ಕೂಟವನ್ನು 1994ರ ತನಕ ಯುರೋಪಿಯನ್ ಸಮುದಾಯ ಎಂದು ಕರೆಯಲಾಗುತ್ತಿತ್ತು. ಯುರೋಪಿಯನ್ ಒಕ್ಕೂಟ ಈಗ ವಿಶ್ವದ ಅತೀ ದೊಡ್ಡ ಮತ್ತು ಅತೀ ಶ್ರೀಮಂತ ವ್ಯಾಪಾರಿ ಪ್ರದೇಶವಾಗಿದೆ. ಇದರ ಕೇಂದ ಕಚೇರಿ ಬೆಲ್ಜಿಯಂನ ಬ್ರುಸೆಲ್ಸ್‌ನಲ್ಲಿದೆ. ಯುರೋಪಿಯನ್ ಸಂಸತ್ತಿನಲ್ಲಿ ಎಲ್ಲಾ ಸದಸ್ಯ ರಾಷ್ಟ್ರಗಳ ಸದಸ್ಯರಿದ್ದಾರೆ.

## 1.2.8. ಗುಂಪು ಎಂಟು

ಗುಂಪು ಎಂಟು (ಜಿ-8) ಎಂಬುದು ಒಂದು ಎಂಟು ಪ್ರಮುಖ ಕೈಗಾರಿಕಾ ಪ್ರಜಾಪ್ರಭುತ್ವ ರಾಷ್ಟ್ರಗಳ ಸಂಘಟನೆಯಾಗಿದ್ದು, 1985ರಲ್ಲಿ ಸ್ಥಾಪನೆಯಾಯಿತು. ವಿಶ್ವ ಆರ್ಥಿಕ ಮತ್ತು ರಾಜಕೀಯ ವಿಷಯಗಳನ್ನು ಚರ್ಚಿಸಲು ಇದರ ಸದಸ್ಯರು ಕಾಲಕಾಲಕ್ಕೆ ಸಭೆ ಸೇರುತ್ತಾರೆ. ಕೆನಡ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಇಂಗ್ಲೇಂಡ್, ಅಮೆರಿಕಾ ಮತ್ತು ರಷ್ಯಾ ಇದರ ಸದಸ್ಯ ರಾಷ್ಟ್ರಗಳಾಗಿವೆ.

## 1.2.9. ಆಫ್ರಿಕನ್ ಒಕ್ಕೂಟ

ಆಫ್ರಿಕನ್ ಏಕತೆಯ ಸಂಘಟನೆಯನ್ನು ಈಗಾ ಆಫ್ರಿಕನ್ ಒಕ್ಕೂಟ ಎಂದು ಕರೆಯಲಾಗುತ್ತಿದ್ದು, ಇದು ಮೇ 1963ರಲ್ಲಿ ಅಸ್ತಿತ್ವಕ್ಕೆ ಬಂತು. ಇದರ ಮುಖ್ಯ ಉದ್ದೇಶಗಳು ಆಫ್ರಿಕನ್ ರಾಷ್ಟ್ರಗಳ ನಡುವೆ ಏಕತೆ ಮತ್ತು ಐಕ್ಯಮತ ಸಾಧಿಸುವುದು, ವಸಾಹತು ಶಾಹಿಯನ್ನು ತೆಗೆದು ಹಾಕುವುದು ಹಾಗೂ ಸದಸ್ಯ ರಾಷ್ಟ್ರಗಳ ಸ್ವಾತಂತ್ರ್ಯದ ರಕ್ಷಣೆ ಮಾಡುವುದಾಗಿದೆ. 2001ರ ಜುಲೈನಲ್ಲಿ ಆಫ್ರಿಕನ್ ನಾಯಕರು ಆಫ್ರಿಕನ್ ಏಕತೆ ಸಂಘಟನೆಯನ್ನು ಬದಲಾಯಿಸಿ ಆಫ್ರಿಕನ್ ಒಕ್ಕೂಟ ರಚಿಸುವ ಒಂದು ಯೋಜನೆಯನ್ನು ಒಪ್ಪಿದರು. ಇದರಲ್ಲಿ 53 ಸದಸ್ಯ ರಾಷ್ಟ್ರಗಳಿವೆ. 2002ರಲ್ಲಿ ಆಫ್ರಿಕನ್ ಒಕ್ಕೂಟವೆಂಬ ಹೊಸ ಹೆಸರನ್ನು ಅಂಗೀಕರಿಸಲಾಯಿತು. ಇದರ ಕೇಂದ್ರ ಕಚೇರಿ ಇಥಿಯೋಪಿಯಾದ ಅದ್ದೀಸ್ ಅಬಾಬದಲ್ಲಿದೆ.

## 1.2.10. ಇಸ್ಲಾಮಿಕ್ ಕಾನ್ಫರೆನ್ಸ್ ಸಂಘಟನೆ

ಇಸ್ಲಾಮಿಕ್ ಕಾನ್ಫರೆನ್ಸ್ ಸಂಘಟನೆ 1969ರಲ್ಲಿ ಸ್ಥಾಪಿಸಲ್ಪಟ್ಟಿತು. ಇದರಲ್ಲಿ ಪ್ಯಾಲಸ್ತೇನ್ ಲಿಬರೇಷನ್ ಸಂಘಟನೆ ಸೇರಿದಂತೆ 57 ಸದಸ್ಯ ರಾಷ್ಟ್ರಗಳಿವೆ. ಇದು ಇಸ್ಲಾಮಿಕ್ ಐಕ್ಯಮತ ಮತ್ತು ಸಹಕಾರವನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿದೆ. ಇದರ ಕಚೇರಿ ಸೌದಿ ಅರೇಬಿಯಾದ ಜೆಡ್ಡಾದಲ್ಲಿದೆ.

## 1.2.11. ಅಲಿಪ್ತ ಚಳುವಳಿ (ನ್ಯಾಮ್)

ಅಲಿಪ್ತ ಚಳುವಳಿಯು ಹೆಚ್ಚಿನ ಅಭಿವೃದ್ಧಿಶೀಲ ರಾಷ್ಟ್ರಗಳಿರುವ 114 ರಾಷ್ಟ್ರಗಳ ಕುರಿತಾಗಿದೆ. ಅಲಿಪ್ತತೆಯ ತತ್ವಗಳನ್ನು 1955ರ ಬಂಡುಂಗ್ (ಇಂಡೋನೇಶಿಯಾ) ಘೋಷಣೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಅಲ್ಲದೆ ಅದನ್ನು ಜವಹರಲಾಲ್ ನೆಹರೂ, ಜೋಸಿಪ್ ಬ್ರೋಜ್ ಟಿಟೊ ಮತ್ತು ಗಾಮೆಲ್ ಅಬ್ದುಲ್ ನಾಸರ್ ಅವರಿಂದ 1956ರ ಬ್ರಿಯೋನಿ ಅಂದರೆ ಹಿಂದಿನ ಯುಗೋಸ್ಲೇವಿಯಾ ಘೋಷಣೆಯಲ್ಲಿ ಪುನರಾವರ್ತನೆ ಮಾಡಲಾಗಿದೆ. ಮೊದಲ ಅಲಿಪ್ತ ಸಮ್ಮೇಳನ 1961ರಲ್ಲಿ ಬೆಲ್‌ಗ್ರೇಡ್‌ನಲ್ಲಿ ನಡೆಯಿತು. ಅದರಲ್ಲಿ 25 ರಾಷ್ಟ್ರಗಳು ಭಾಗವಹಿಸಿದ್ದವು. ಈ ಚಳುವಳಿ ಮೂಲಭೂತ ಧ್ಯೇಯ ಶಾಂತಿ, ನಿಶ್ಶಸ್ತ್ರೀಕರಣ, ಅಭಿವೃದ್ಧಿ, ಸ್ವಾತಂತ್ರ್ಯ, ಬಡತನ ಮತ್ತು ಅನಕ್ಷರತೆ ನಿರ್ಮೂಲನೆಯಾಗಿದೆ.

## 1.2.12. ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಘಟನೆ (ಸಾರ್ಕ್)

ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಘಟನೆಯು ಭಾರತ, ಮಾಲ್ಡಿವ್ಸ್, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಭೂತಾನ್ ಮತ್ತು ನೇಪಾಳ ರಾಷ್ಟ್ರಗಳನ್ನೊಳಗೊಂಡಿದೆ. ಇದು 1985ರ ಡಿಸೆಂಬರ್ ಮೊದಲ ಭಾಗದಲ್ಲಿ ನಡೆದ ಡಾಕಾ ಶೃಂಗಸಭೆಯ ನಂತರ ಹುಟ್ಟಿಕೊಂಡಿತು. ಇದರ ಕೇಂದ್ರ ಕಚೇರಿ ನೇಪಾಳದಲ್ಲಿದೆ.

## 1.3. ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ಭವಿಷ್ಯ

ತುಂಬಾ ಸಮೃದ್ಧ ಮತ್ತು ಭದ್ರ ಪ್ರಪಂಚದ ಅಸ್ತಿತ್ವಕ್ಕೆ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳು ಸಹಕರಿಸುತ್ತವೆ. ಎಂಬ ಭರವಸೆ ಸಣ್ಣ ರಾಷ್ಟ್ರಗಳಲ್ಲಿದೆ. ಆದರೆ ಅಫ್‌ಘಾನ್ ಯುದ್ಧ ಮತ್ತು ಇರಾಕ್ ಆಕ್ರಮಣದ ನಂತರ ಅಂತರಾಷ್ಟ್ರೀಯ ರಾಜಕೀಯ ಸಂಘಟನೆಗಳು ಅಮೇರಿಕಾ ಮತ್ತು ಇಂಗ್ಲೆಂಡ್‌ನಂತ ಪ್ರಬಲ ಪಾಶ್ಚಿಮಾತ್ಯ ರಾಷ್ಟ್ರಗಳ ಏಕಾತ್ಮಕ ಕ್ರಮಗಳನ್ನು ತಡೆಯಲು ವಿಫಲವಾಗಿವೆ ಎಂಬ ನಿರಂತರ ಆರೋಪಗಳನ್ನು ಎದುರಿಸುತ್ತಿವೆ. ಅಲ್ಲದೆ ಹೊಸ ಬಲಿಷ್ಠ ರಾಷ್ಟ್ರಗಳಾದ ಭಾರತ, ಜಪಾನ್ ಮತ್ತು ಜರ್ಮನಿಗಳನ್ನು ಶಾಶ್ವತ ಸದಸ್ಯರನ್ನು ಸೇರಿಸಿ ಭದ್ರತಾ ಮಂಡಳಿ ವಿಸ್ತರಿಸಬೇಕೆಂಬ ಒತ್ತಡ ಕೂಡಾ ಇದೆ. ಅನೇಕ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಈ ಸಲಹೆ ನೀಡಲಾಗಿದೆ.

ಟೀಕೆಗಳ ಹೊರತಾಗಿಯೂ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳು ವಿವಿಧ ಸದಸ್ಯ ರಾಷ್ಟ್ರಗಳ ನಡುವೆ ಮಾತುಕತೆ, ಆರ್ಥಿಕ ಮತ್ತು ಸಾಮಾಜಿಕ ಸಹಕಾರ, ವಿವಾದ ಪರಿಹಾರ ಮತ್ತು ಶಾಂತಿ ಸ್ಥಾಪನೆಯ ಭರವಸೆ ನೀಡುತ್ತಿವೆ. ಉದಾಹರಣೆಗೆ ಸಾರ್ಕ್ ಶೃಂಗ ಸಭೆಯ ಭಾಗವಾಗಿ ಅನೇಕ ಇಂಡೋಪಾಕ್ ಮಾತುಕತೆಗಳು ನಡೆದಿವೆ. ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಸಾಗಾಟ ನಿಯಂತ್ರಿಸಲು ಸಾರ್ಕ್ ದೇಶಗಳು ಜಂಟಿ ಕಾರ್ಯ ಮಂತ್ರಗಳನ್ನು ರೂಪಿಸಿವೆ. ವಿವಿಧ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ಅನುದಾನ ತಡೆದ ಅಂತಾರಾಷ್ಟ್ರೀಯ ವಿನಿಮಯ ಕಾರ್ಯಕ್ರಮಗಳಡಿಯಲ್ಲಿ ಪರಸ್ಪರ ಅರಿವು ಮತ್ತು ಸ್ನೇಹ ಸಾಧಿಸಲು ಅನೇಕ ಶೈಕ್ಷಣಿಕ ಅವಕಾಶಗಳೂ ಕೂಡಾ ಇವೆ.

## 1.4. ಸಾರಾಂಶ

ಎರಡನೇ ಮಹಾಯುದ್ಧದ ಮುಕ್ತಾಯವು ಅಂತಾರಾಷ್ಟ್ರೀಯ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಮಾನವೀಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಅಂತಾರಾಷ್ಟ್ರೀಯ ಸಹಕಾರ ಸಾಧಿಸಲು ಅನೇಕ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ಉ‍ಗಮ ಮತ್ತು ವಿಕಾಸಕ್ಕೆ ಕಾರಣವಾಯಿತು. ಎರಡನೇ ಮಹಾಯುದ್ಧದ ನಂತರ ವಿಶ್ವಸಂಸ್ಥೆಯಂತಹ ಬಹು ಆಯಾಮದ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳು ಹುಟ್ಟಿಕೊಂಡವು. ಅವು ಹಣ ಮತ್ತು ವಿಚಾರಗಳು ಎರಡೂ ದೃಷ್ಟಿಯಿಂದಲೂ ಅಭಿವೃದ್ಧಿ ಸಹಕಾರ ಒದಗಿಸಿದವು.

ವಿಶ್ವಸಂಸ್ಥೆಯು ಅತೀ ದೊಡ್ಡ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಯಾಗಿದೆ. ಇದರ ಕೇಂದ್ರ ಕಚೇರಿ ನ್ಯೂಯಾರ್ಕ್‌ನಲ್ಲಿದೆ. ಇದರ ಪ್ರಮುಖ ಅಂಗಗಳೆಂದರೆ : ಸಾಮಾನ್ಯ ಸಭೆ, ಸಚಿವಾಲಯ, ಭದ್ರತಾ ಮಂಡಳಿ, ವಿಶ್ವಸ್ಥ ಮಂಡಳಿ, ಆರ್ಥಿಕ ಮತ್ತು ಸಾಮಾಜಿಕ ಮಂಡಳಿ ಮತ್ತು ಅಂತಾರಾಷ್ಟ್ರೀಯ ನ್ಯಾಯಾಲಯ.

ವಿಶ್ವ ಸಂಸ್ಥೆಯಲ್ಲಿ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಪ್ರಮುಖ ಪಾತ್ರವಹಿಸುವ ಮತ್ತು ಆರ್ಥಿಕ ಮತ್ತು ಅಭಿವೃದ್ಧಿ ವಿಷಯಗಳಲ್ಲಿ ಅಂತರ್‌ರಾಷ್ಟ್ರೀಯ ಮತ್ತು ಬಹು ಪ್ರಾದೇಶಿಕ ಸಹಕಾರವನ್ನು ಪ್ರೋತ್ಸಾಹಿಸುವ ಪ್ರಮುಖ ಪ್ರಾದೇಶಿಕ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳಿವೆ. ಅರಬ್‌ಲೀಗ್, ಆಫ್ರಿಕನ್ ಒಕ್ಕೂಟ, ಜಿ-8, ಇಸ್ಲಾಮಿಕ್ ರಾಷ್ಟ್ರಗಳ ಸಂಘಟನೆ, ಯುರೋಪಿಯನ್ ಒಕ್ಕೂಟ, ಅಸಿಯಾನ್ ಮತ್ತು ಸಾರ್ಕ್ ಅಂತಹ ಕೆಲವು ಸಂಘಟನೆಗಳಾಗಿವೆ.

ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳು ಪ್ರಬಲ ಪಾಶ್ಚಿಮಾತ್ಯ ರಾಷ್ಟ್ರಗಳ ಏಕಾತ್ಮಕ ಕ್ರಮಗಳನ್ನು ತಡೆಯಲು ವಿಫಲವಾಗಿವೆ ಎಂಬ ಆರೋಪಗಳನ್ನು ಎದುರಿಸುತ್ತಿವೆ. ಟೀಕೆಗಳ ಹೊರತಾಗಿಯೂ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳು ಸದಸ್ಯ ರಾಷ್ಟ್ರಗಳ ನಡುವೆ ಮಾತುಕತೆ, ಆರ್ಥಿಕ ಮತ್ತು ಸಾಮಾಜಿಕ ಸಹಕಾರ, ವಿವಾದ ಪರಿಹಾರ ಮತ್ತು ಶಾಂತಿ ಸ್ಥಾಪನೆಯ ಭರವಸೆ ಹೊಂದಿದೆ.

**ಚಟುವಟಿಕೆ 1 :**

1. ಅಂತರಾಷ್ಟ್ರೀಯ ಸಂಘಟನೆಗಳ ಚಟುವಟಿಕೆಗಳನ್ನು ತಿಳಿಯಲು ಒಂದು ಸಂಘಟನೆಯ ಕಚೇರಿಗೆ ಭೇಟಿ ನೀಡಿ.
2. ಪತ್ರಕರ್ತರು ಹೇಗೆ ಈ ಸಂಘಟನೆಗಳನ್ನು ಸುದ್ದಿ ಮೂಲಗಳನ್ನಾಗಿ ಬಳಸುತ್ತಾರೆ ಎಂಬುದನ್ನು ತಿಳಿಯಿರಿ.

## 1.5. ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ :** ನಿಮ್ಮ ಉತ್ತರಗಳನ್ನು ಘಟಕದಲ್ಲಿರುವ ಉತ್ತರಗಳೊಂದಿಗೆ ತುಲನೆ ಮಾಡಿ.

1. ವಿಶ್ವಸಂಸ್ಥೆಯ ವಿವಿಧ ಅಂಗಗಳನ್ನು ವಿವರಿಸಿ.
2. ಪ್ರಾದೇಶಿಕ ರಾಜಕೀಯ ಸಂಘಟನೆಗಳ ವಿವಿಧ ವಿಧಗಳು ಮತ್ತು ಸ್ವರೂಪವನ್ನು ಚರ್ಚಿಸಿ.
3. ಜಾಗತಿಕ ಶಾಂತಿಯನ್ನು ಪ್ರೋತ್ಸಾಹಿಸುವಲ್ಲಿ ಅಂತಾರಾಷ್ಟ್ರೀಯ ರಾಜಕೀಯ ಸಂಘಟನೆಗಳ ವ್ಯಾಪ್ತಿ ಏನು ?

## 1.6. ಹೆಚ್ಚಿನ ಓದಿಗಾಗಿ


ಮನೋರಮಾ ಇಯರ್ ಬುಕ್ 2007

ಎ.ಪಿ. ಜೈನ್(ಸಂ)-ಇಂಡಿಯಾ ಆಂಡ್ ದಿ ವರ್ಲ್ಡ್

ಬಿ. ವಾರ್ಡ್ ಜ್ಯಾಕ್‌ಸನ್-ಇಂಡಿಯಾ ಆಂಡ್ ದಿ ವೆಸ್ಟ್

ಮಾರ್ಟಿನ್ ಕಿಲ್ಸನ್-ನ್ಯೂ ಸ್ಟೇಟ್ಸ್ ಇನ್ ದಿ ಮಾಡರ್ನ್ ವರ್ಲ್ಡ್

## ಟಿಪ್ಪಣಿ

ರಚನೆ :


2.0. ಉದ್ದೇಶಗಳು

2.1. ಪ್ರಸ್ತಾವನೆ

2.2. ಭಾರತದ ರಾಜಕೀಯ ವ್ಯವಸ್ಥೆ

2.2.1. ಭಾರತದ ರಾಷ್ಟ್ರಪತಿ

2.2.2. ಉಪರಾಷ್ಟ್ರಪತಿ

2.2.3. ಮಂತ್ರಿ ಮಂಡಲ

2.2.4. ರಾಜ್ಯಸಭೆ

2.2.5. ಲೋಕಸಭೆ

2.3. ರಾಜ್ಯ ಸರಕಾರಗಳು

2.4. ನ್ಯಾಯಾಂಗ ವ್ಯವಸ್ಥೆ

2.4.1. ಸರ್ವೋಚ್ಛ ನ್ಯಾಯಾಲಯ

2.4.2. ಉಚ್ಛ ನ್ಯಾಯಾಲಯಗಳು

2.5. ಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನಬದ್ಧ ಸಂಬಂಧಗಳು

2.6. ಸಾರಾಂಶ

2.7. ನಿಮ್ಮ ಪ್ರಗತಿ ಪರಿಶೀಲನೆ

2.8. ಹೆಚ್ಚಿನ ಓದಿಗಾಗಿ

## 2.0. ಉದ್ದೇಶಗಳು :

ಮಹಾತ್ಮಾ ಗಾಂಧಿ ಹಾಗೂ ಅವರ ಸತ್ಯಾಗ್ರಹ ಮತ್ತು ಅಹಿಂಸೆಗಳೆಂಬ ವಿಶಿಷ್ಟ ತತ್ವಗಳಿಂದ ಪ್ರೇರಿತಗೊಂಡ ಹಾಗೂ ಮಾರ್ಗದರ್ಶನ ಪಡೆದ ಭಾರತ ಆಗಸ್ಟ್ 15, 1947ರಲ್ಲಿ ಸ್ವಾತಂತ್ರ್ಯ ಪಡೆಯಿತು. ಅನಂತರ ಭಾರತದ ಪ್ರಜೆಗಳು ಒಂದು ಸಂವಿಧಾನವನ್ನು ಅಳವಡಿಸಿಕೊಂಡರು. ಆ ಸಂವಿಧಾನವು ಅಂದಿನಿಂದ ಭಾರತ ಗಣರಾಜ್ಯದ ಆಡಳಿತ ನಡೆಸುತ್ತಾ ಬಂದಿದೆ. ಭಾರತದ ಸಂವಿಧಾನವು ಸರಕಾರದ ಮೂಲಭೂತ ರಚನೆಯನ್ನು ವಿವರಿಸುತ್ತದೆ. ಅದರಂತೆ ಪ್ರಜೆಗಳ ಆಳ್ವಿಕೆ ನಡೆಯುತ್ತದೆ. ಅದು ಸರಕಾರದ ಮುಖ್ಯ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ರಚನೆಗಳನ್ನು ತಿಳಿಸುತ್ತದೆ. ಸಂವಿಧಾನವು ಪ್ರತಿಯೊಂದು ಅಂಗದ ಅಧಿಕಾರಿಗಳನ್ನು ವ್ಯಾಖ್ಯಾನಿಸುವುದಲ್ಲದೆ, ಅವುಗಳ ಜವಾಬ್ದಾರಿಗಳನ್ನು ವಿವರಿಸುತ್ತದೆ. ಅದು ವಿವಿಧ ಅಂಗಗಳ ನಡುವಿನ ಸಂಬಂಧವನ್ನು ನಿಯಂತ್ರಿಸುತ್ತದೆ. ಆದ್ದರಿಂದ ಸಂವಿಧಾನವು ಭಾರತದಲ್ಲಿ ರಾಜಕೀಯದ ಮೂಲ ಆಧಾರವಾಗಿ ಪರಿಣಮಿಸಿದೆ. ದೇಶದ ಇತರ ಎಲ್ಲಾ ಕಾನೂನುಗಳಿಗಿಂತ ಸಂವಿಧಾನವು ಶ್ರೇಷ್ಠವಾದುದು. ಸರಕಾರ ಜಾರಿಗೆ ತರುವ ಪ್ರತಿಯೊಂದು ಕಾನೂನು ಸಂವಿಧಾನಕ್ಕೆ ಅನುಗುಣವಾಗಿರಬೇಕು. ಪ್ರಸ್ತುತ ಘಟಕದಲ್ಲಿ ಇವೆ.

- ಭಾರತೀಯ ರಾಜಕೀಯ ವ್ಯವಸ್ಥೆಯ ರಚನೆ ತಿಳಿಯಬಹುದು.
- ಭಾರತೀಯ ರಾಜಕೀಯ ವ್ಯವಸ್ಥೆಯ ಮೂಲಭೂತ ಅಂಗಗಳನ್ನು ಅರ್ಥಮಾಡಿಕೊಳ್ಳಬಹುದು.
- ಸರಕಾರದ ವಿವಿಧ ಅಂಗಗಳ ಕಾರ್ಯಗಳನ್ನು ತಿಳಿಯಬಹುದು ಮತ್ತು
- ಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನಬದ್ಧ ಸಂಬಂಧಗಳನ್ನು ಅಧ್ಯಯನ ಮಾಡಬಹುದು.

## 2.1 ಪ್ರಸ್ತಾವನೆ

ಭಾರತೀಯ ರಾಜಕೀಯ ವ್ಯವಸ್ಥೆಯು ಒಂದು ಸಂಯುಕ್ತ ಸಂಸದೀಯ ಪ್ರತಿನಿಧಿತ್ವ ಪ್ರಜಾಪ್ರಭುತ್ವ ಗಣರಾಜ್ಯದ ಚೌಕಟ್ಟಿನಲ್ಲಿದೆ. ಇದರಲ್ಲಿ ಭಾರತದ ಪ್ರಧಾನ ಮಂತ್ರಿ ಸರಕಾರದ ಮುಖ್ಯಸ್ಥನಾಗಿರುತ್ತಾನೆ. ಇಲ್ಲಿ ಬಹು ಪಕ್ಷ ಪದ್ಧತಿ ಅಸ್ತಿತ್ವದಲ್ಲಿದೆ. ಕಾರ್ಯಾಂಗದ ಅಧಿಕಾರವನ್ನು ಸರಕಾರ ಚಲಾಯಿಸುತ್ತದೆ. ಕೇಂದ್ರೀಯ ಶಾಸನಬದ್ಧ ಅಧಿಕಾರವು ಸರಕಾರ ಮತ್ತು ಭಾರತದ ಸಂಸತ್ತಿನ ಎರಡು ಸದನಗಳಲ್ಲಿ ಇರುತ್ತದೆ. ನ್ಯಾಯಾಂಗವು ಕಾರ್ಯಾಂಗ ಮತ್ತು ಶಾಸಕಾಂಗಗಳಿಂದ ಮುಕ್ತವಾಗಿದೆ.

ಸಂವಿಧಾನದ ಪ್ರಕಾರ ಭಾರತವು ಒಂದು "ಸಾರ್ವಭೌಮ ಸಮಾಜವಾದಿ ಜಾತ್ಯಾತೀತ ಪ್ರಜಾಪ್ರಭುತ್ವ ಗಣರಾಜ್ಯ" ವಾಗಿದೆ. ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಸರಕಾರ ಹೊಂದಿದ ಒಂದು ದೊಡ್ಡ ದೇಶ ಭಾರತವಾಗಿದೆ. ಅಮೇರಿಕಾದಂತೆ ಭಾರತದಲ್ಲೂ ಒಂದು ಒಕ್ಕೂಟ ಮಾದರಿಯ ಸರಕಾರವಿದೆ. ಆದರೆ ತನ್ನ ರಾಜ್ಯಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಕೇಂದ್ರ ಸರಕಾರಕ್ಕೆ ಹೆಚ್ಚು ಅಧಿಕಾರವಿದೆ. ಮತ್ತು ಕೇಂದ್ರ ಸರಕಾರವು ಬ್ರಿಟೀಷ್ ಸಂಸದೀಯ ವ್ಯವಸ್ಥೆಯಂತೆ ರಚನೆಯಾಗುತ್ತದೆ. ಯಾವುದಾದರೂ ರಾಜ್ಯದಲ್ಲಿ ಬಹುಮತ ಪಡೆದ ಪಕ್ಷಗಳಿಲ್ಲದಿದ್ದರೆ ಅಥವಾ ಸಮ್ಮಿಶ್ರ ಸರಕಾರದ ರಚನೆ ಅಸಾಧ್ಯವಾದರೆ ಅಥವಾ ಸಂವಿಧಾನದ ಕೆಲವು ವಿಧಿಗಳಂತೆ ಕೇಂದ್ರ ಸರಕಾರ ಅಂಥ ರಾಜ್ಯ ಸರಕಾರಗಳನ್ನು ವಜಾ ಮಾಡಬಹುದು ಮತ್ತು ರಾಷ್ಟ್ರಪತಿ ಆಳ್ವಿಕೆ ಎಂದು ಕರೆಯುವ ನೇರ ಒಕ್ಕೂಟ ಆಡಳಿತವನ್ನು ಹೇರಬಹುದು. ಭಾರತದ ಸಂವಿಧಾನದಲ್ಲಿ ವಿವರಿಸಿದ ಸರಕಾರದ ರಚನೆ ಕುರಿತು ಕೆಲವು ವಿವರಗಳು ಕೆಳಗಿನಂತಿವೆ.

## 2.2. ಭಾರತದ ರಾಜಕೀಯ ವ್ಯವಸ್ಥೆ

ಭಾರತವು ರಾಜಕೀಯದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಅನುಸರಿಸುತ್ತದೆ. ರಾಜ್ಯಗಳ ಒಂದು ಒಕ್ಕೂಟವಾದ ಭಾರತ ಸರಕಾರದಲ್ಲಿ ಸಂಸದೀಯ ವ್ಯವಸ್ಥೆ ಹೊಂದಿರುವ ಒಂದು ಸಾರ್ವಭೌಮ, ಜಾತ್ಯಾತೀತ, ಪ್ರಜಾಪ್ರಭುತ್ವ ಗಣರಾಜ್ಯವಾಗಿದೆ. ಭಾರತೀಯ ಆಡಳಿತ ಪದ್ಧತಿಯು ಸಂವಿಧಾನಕ್ಕೆ ಅನುಗುಣವಾಗಿ ಆಡಳಿತ ನಡೆಸುತ್ತದೆ. ನವೆಂಬರ್ 26, 1949 ಸಂವಿಧಾನ ಸಭೆಯು ಅಂಗೀಕರಿಸಿದ ಸಂವಿಧಾನವನ್ನು ಜನವರಿ 26, 1950ರಲ್ಲಿ ಜಾರಿಗೆ ತರಲಾಯಿತು.

ಭಾರತದಲ್ಲಿ ರಾಷ್ಟ್ರಪತಿ ಕಾರ್ಯಾಂಗದ ಸಾಂವಿಧಾನಿಕ ಮುಖ್ಯಸ್ಥರಾಗಿರುತ್ತಾರೆ. ಆದರೆ ನಿಜವಾದ ಕಾರ್ಯಾಂಗದ ಅಧಿಕಾರ ಪ್ರಧಾನಮಂತ್ರಿ ಮುಖ್ಯಸ್ಥರಾಗಿರುವ ಮಂತ್ರಿಮಂಡಲದ ಕೈಯಲ್ಲಿರುತ್ತದೆ. ಸಂವಿಧಾನದ 74(1) ವಿಧಿಯು ರಾಷ್ಟ್ರಪತಿಗೆ ಸಹಕರಿಸಲು ಮತ್ತು ಸಲಹೆ ನೀಡಲು ಪ್ರಧಾನಮಂತ್ರಿ ನೇತೃತ್ವದ ಮಂತ್ರಿ ಮಂಡಲ ಇರಬೇಕೆಂದು ತಿಳಿಸುತ್ತದೆ. ರಾಷ್ಟ್ರಪತಿಯು ಮಂತ್ರಿಮಂಡಲದ ಸಲಹೆಯಂತೆ ತನ್ನ ಕಾರ್ಯಗಳನ್ನು ಚಲಾಯಿಸುತ್ತಾರೆ. ಮಂತ್ರಿ ಮಂಡಲವು ಜನಪ್ರತಿನಿಧಿಗಳ ಸದನವಾದ ಲೋಕಸಭೆಗೆ ಒಟ್ಟಾರೆ ಜವಾಬ್ದಾರಿಯಾಗಿರುತ್ತದೆ.

ರಾಜ್ಯಗಳಲ್ಲಿ ರಾಷ್ಟ್ರಪತಿಯ ಪ್ರತಿನಿಧಿಯಾಗಿ ರಾಜ್ಯಪಾಲರು ಕಾರ್ಯಾಂಗದ ಮುಖ್ಯಸ್ಥರಾಗಿರುತ್ತಾರೆ. ಆದರೆ ನಿಜವಾದ ಕಾರ್ಯಾಂಗದ ಅಧಿಕಾರ ಮುಖ್ಯಮಂತ್ರಿ ಕೈಯಲ್ಲಿರುತ್ತದೆ. ಅವರು ಮಂತ್ರಿಮಂಡಲದ ಮುಖ್ಯಸ್ಥರಾಗಿರುತ್ತಾರೆ. ರಾಜ್ಯದ ಮಂತ್ರಿಮಂಡಲವು ರಾಜ್ಯದ ಚುನಾಯಿತ ಶಾಸನಸಭೆಗೆ ಒಟ್ಟಾರೆ ಜವಾಬ್ದಾರಿಯಾಗಿರುತ್ತದೆ.

ಸಂವಿಧಾನವು ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳ ನಡುವಿನ ಶಾಸನಬದ್ಧ ಅಧಿಕಾರದ ಹಂಚಿಕೆಯನ್ನು ನೋಡಿಕೊಳ್ಳುತ್ತದೆ. ಅಲ್ಲದೆ ಉಳಿದ ಅಧಿಕಾರಿಗಳು ಸಂಸತ್ತಿನಲ್ಲೇ ಇರುವಂತೆ ಮಾಡುತ್ತದೆ. ಸಂವಿಧಾನವನ್ನು ತಿದ್ದುವ ಅಧಿಕಾರ ಕೂಡಾ ಸಂಸತ್ತಿಗೆ ಮಾತ್ರ ಇದೆ. ಕೇಂದ್ರದ ಕಾರ್ಯಾಂಗದಲ್ಲಿ ರಾಷ್ಟ್ರಪತಿ, ಉಪರಾಷ್ಟ್ರಪತಿ ಹಾಗೂ ರಾಷ್ಟ್ರಪತಿಗೆ ಸಹಕರಿಸಲು ಮತ್ತು ಸಲಹೆ ನೀಡಲು ಪ್ರಧಾನಮಂತ್ರಿ ನೇತೃತ್ವದ ಮಂತ್ರಿಮಂಡಲವಿರುತ್ತದೆ.

### 2.2.1. ಭಾರತದ ರಾಷ್ಟ್ರಪತಿ

ಭಾರತದ ರಾಷ್ಟ್ರಪತಿಯು ಭಾರತೀಯ ರಾಜಕೀಯ ವ್ಯವಸ್ಥೆಯ ಮುಖ್ಯಸ್ಥರಾಗಿರುತ್ತಾರೆ. ಅವರು ದೇಶದ ಕಾರ್ಯಾಂಗದ ಮುಖ್ಯಸ್ಥರು ಹಾಗೂ ಎಲ್ಲಾ ಸೇನಾಪಡೆಗಳ ಸರ್ವೋಚ್ಚ ದಂಡನಾಯಕ ಕೂಡಾ ಆಗಿರುತ್ತಾರೆ. ರಾಷ್ಟ್ರಪತಿಯನ್ನು ಸಂಸತ್ತಿನ ಎರಡು ಸದನಗಳ ಚುನಾಯಿತ ಸದಸ್ಯರು ಹಾಗೂ ರಾಜ್ಯಗಳ ವಿಧಾನಸಭೆಗಳ ಚುನಾಯಿತ ಸದಸ್ಯರು ಚುನಾವಣೆ ಮೂಲಕ ಆಯ್ಕೆ ಮಾಡುತ್ತಾರೆ. ರಾಷ್ಟ್ರಪತಿಯವರ ಅಧಿಕಾರದ ಅವದಿ ಐದು ವರ್ಷ ಮತ್ತು ಮರು ಆಯ್ಕೆಯನ್ನು ಬಯಸಬಹುದು. ರಾಷ್ಟ್ರಪತಿ ಭವನ ರಾಷ್ಟ್ರಪತಿಗಳ ಅಧಿಕೃತ ನಿವಾಸವಾಗಿರುತ್ತದೆ.

ರಾಷ್ಟ್ರಪತಿಗೆ ಕಾರ್ಯಾಂಗದ ಶಾಸಕಾಂಗದ, ಹಣಕಾಸಿನ, ನ್ಯಾಯಾಂಗದ ಮತ್ತು ಇನ್ನೂಳಿದ ಅಧಿಕಾರಗಳಿರುತ್ತರೆ. ಇತರ ಅಧಿಕಾರಗಳಲ್ಲಿ, ರಾಷ್ಟ್ರಪತಿಯು ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ ಸೇನಾ ದಂಗೆಯಿಂದ ದೇಶದ ಅಥವಾ ದೇಶದ ಯಾವುದೇ ಭಾಗದಲ್ಲಿ ಭದ್ರತೆಗೆ ಬೆದರಿಕೆಯಿದ್ದರೆ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಬಹುದು. ದೇಶದಲ್ಲಿ ಸಂವಿಧಾನಿಕ ಬಿಕ್ಕಟ್ಟು ತಲೆದೋರಿದರೆ ದೇಶದ ಸರಕಾರದ ಎಲ್ಲಾ ಅಥವಾ ಯಾವುದಾದರೂ ಕಾರ್ಯಗಳನ್ನು ವಹಿಸಿಕೊಳ್ಳಬಹುದು.

## 2.2.2. ಉಪರಾಷ್ಟ್ರಪತಿ

ರಾಷ್ಟ್ರಪತಿಯನ್ನು ಆಯ್ಕೆ ಮಾಡಿದಂತೆ ಉಪರಾಷ್ಟ್ರಪತಿಯ ಆಯ್ಕೆಯನ್ನು ಮಾಡಲಾಗುತ್ತದೆ. ಆದರೆ ಇಲ್ಲಿ ಸಂಸತ್ತಿನ ಉಭಯ ಸದನಗಳ ಸದಸ್ಯರು ಮಾತ್ರ ಮತ ಚಲಾಯಿಸುತ್ತಾರೆ. ಉಪರಾಷ್ಟ್ರಪತಿಯ ಅಧಿಕಾರ ಅವಧಿ ಕೂಡಾ ಐದು ವರ್ಷ. ಅವರು ರಾಜ್ಯಸಭೆಯ ಅಧ್ಯಕ್ಷರಾಗಿರುತ್ತಾರೆ.

## 2.2.3. ಮಂತ್ರಿ ಮಂಡಲ

ಮಂತ್ರಿಮಂಡಲವು ಕ್ಯಾಬಿನೆಟ್ ಸಚಿವರು, ಸ್ವತಂತ್ರ ನಿರ್ವಹಣೆಯ ಅಥವಾ ಇತರ ರಾಜ್ಯಸಚಿವರು, ಮತ್ತು ಉಪ ಮಂತ್ರಿಗಳನ್ನು ಒಳಗೊಂಡಿರುತ್ತದೆ. ಪ್ರಧಾನಮಂತ್ರಿಯವರು ಕೇಂದ್ರದ ಆಡಳಿತಕ್ಕೆ ಸಂಬಂಧಿಸಿದಂತೆ ಮಂತ್ರಿಮಂಡಲದ ಎಲ್ಲಾ ನಿರ್ಧಾರಗಳು ಹಾಗೂ ಕಾನೂನಿನ ಪ್ರಸ್ತಾವನೆಗಳನ್ನು ರಾಷ್ಟ್ರಪತಿಗಳಿಗೆ ತಿಳಿಸುತ್ತಾರೆ. ಸಾಮಾನ್ಯವಾಗಿ ಪ್ರತಿಯೊಂದು ಇಲಾಖೆಯಲ್ಲಿ ಸರ್ಕಾರದ ಧೋರಣೆ ಮತ್ತು ನೀತಿಗೆ ಸಂಬಂಧವಾಗಿ ಹಾಗೂ ವಿಷಯಗಳಲ್ಲಿ ಮತ್ತು ಸಾಮಾನ್ಯ ಆಡಳಿತದ ಬಗ್ಗೆ ಮಂತ್ರಿಗಳಿಗೆ ಸಲಹೆ ನೀಡಲು ಭಾರತ ಸರಕಾರದ ಕಾರ್ಯದರ್ಶಿ ಎಂಬ ಹುದ್ದೆ ಹೊಂದಿರುವ ಒಬ್ಬ ಅಧಿಕಾರಿ ಇರುತ್ತಾನೆ. ಉನ್ನತ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ ಸಂಪುಟ ಸಚಿವಾಲಯಕ್ಕೆ ಪ್ರಮುಖ ಸಂಯೋಜನಾ ಪಾತ್ರವಿರುತ್ತದೆ. ಅದು ಪ್ರಧಾನಮಂತ್ರಿಗಳ ಮಾರ್ಗದರ್ಶನದಂತೆ ಕಾರ್ಯ ನಿರ್ವಹಿಸುತ್ತದೆ. ಸೌತ್‌ಬ್ಲಾಕ್ ಭಾರತದ ಪ್ರಧಾನ ಮಂತ್ರಿಗಳ ಗೃಹ ಕಚೇರಿಯಾಗಿದೆ.

ಕೇಂದ್ರದ ಶಾಸಕಾಂಗವನ್ನು ಸಂಸತ್ತು ಎಂದು ಕರೆಯುತ್ತಾರೆ. ಅದು ರಾಷ್ಟ್ರಪತಿ, ರಾಜ್ಯಸಭೆ ಮತ್ತು ಲೋಕಸಭೆಯನ್ನು ಒಳಗೊಂಡಿದೆ. ಎಲ್ಲಾ ಕಾಯ್ದೆಗಳಿಗೆ ಸಂಸತ್ತಿನ ಎರಡೂ ಸದನಗಳ ಒಪ್ಪಿಗೆಯ ಅಗತ್ಯವಿದೆ. ಆದಾಗ್ಯೂ ಹಣಕಾಸು ಮಸೂದೆಗಳ ಸಂದರ್ಭದಲ್ಲಿ ಲೋಕಸಭೆಯ ಅಭಿಪ್ರಾಯ ಪ್ರಮುಖವಾಗಿರುತ್ತದೆ.

## 2.2.4. ರಾಜ್ಯ ಸಭೆ

ರಾಜ್ಯ ಸಭೆಯಲ್ಲಿ 245 ಸದಸ್ಯರಿರುತ್ತಾರೆ. ಅವರಲ್ಲಿ 233 ಮಂದಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸುತ್ತಾರೆ. 12 ಮಂದಿಯನ್ನು ರಾಷ್ಟ್ರಪತಿಗಳು ಖ್ಯಾತ ಪ್ರಜೆಗಳಿಂದ ನಾಮನಿರ್ದೇಶನ ಮಾಡುತ್ತಾರೆ. ರಾಜ್ಯ ಸಭೆಯ ಚುನಾವಣೆಗಳು ಪರೋಕ್ಷವಾಗಿದ್ದು, ಸಂಬಂಧಿಸಿದ ರಾಜ್ಯಗಳ ವಿಧಾನ ಸಭೆಗಳ ಚುನಾಯಿತ ಸದಸ್ಯರು ಆಯ್ಕೆ ಮಾಡುತ್ತಾರೆ. ರಾಜ್ಯಸಭೆಯನ್ನು ವಿಸರ್ಜಿಸಲಾಗುವುದಿಲ್ಲ. ಆದರೆ ಅದರ ಮೂರನೇ ಒಂದರಷ್ಟು ಸದಸ್ಯರು ಪ್ರತೀ ಎರಡು ವರ್ಷಕ್ಕೊಮ್ಮೆ ನಿವೃತ್ತಿಯಾಗುತ್ತಾರೆ.

## 2.2.5. ಲೋಕಸಭೆ

ಲೋಕಸಭೆಯಲ್ಲಿ ಸಾರ್ವತ್ರಿಕ ಚುನಾವಣೆ ಮೂಲಕ ಜನರಿಂದ ನೇರವಾಗಿ ಚುನಾಯಿತರಾದ ಪ್ರತಿನಿಧಿಗಳಿರುತ್ತಾರೆ. ಈ ವರೆಗೆ ಲೋಕಸಭೆ 545 ಸದಸ್ಯರು ಹಾಗೂ ರಾಷ್ಟ್ರಪತಿ ನಾಮ ನಿರ್ದೇಶನ ಮಾಡಿದ ಆಂಗ್ಲೋ ಇಂಡಿಯನ್ ಸಮುದಾಯ ಪ್ರತಿನಿಧಿಸುವ ಇಬ್ಬರು ಸದಸ್ಯರನ್ನು ಒಳಗೊಂಡಿದೆ. ಅಸಮಾನ್ಯ ಸಂದರ್ಭಗಳಲ್ಲಿ ವಿಸರ್ಜನೆಯಾಗುವುದನ್ನು ಹೊರತುಪಡಿಸಿ ಲೋಕ ಸಭೆಯ ಅಧಿಕಾರದ ಅವಧಿ ಐದು ವರ್ಷ.

## 2.3. ರಾಜ್ಯ ಸರಕಾರಗಳು

ರಾಜ್ಯಗಳಲ್ಲಿರುವ ಸರಕಾರ ವ್ಯವಸ್ಥೆಯು ಕೇಂದ್ರ ಸರಕಾರವನ್ನು ಪ್ರತಿಬಿಂಬಿಸುತ್ತದೆ. ದೇಶದಲ್ಲಿ 28 ರಾಜ್ಯಗಳು ಮತ್ತು ದೆಹಲಿ ಸೇರಿದಂತೆ ಕೇಂದ್ರಾಡಳಿತ ಪ್ರದೇಶಗಳಿವೆ. ಒಬ್ಬ ಆಡಳಿತಗಾರನನ್ನು ನೇಮಕ ಮಾಡುವುದರ ಮೂಲಕ ಕೇಂದ್ರಾಡಳಿತ ಪ್ರದೇಶಗಳ

ಆಡಳಿತವನ್ನು ರಾಷ್ಟ್ರಪತಿ ನೋಡಿಕೊಳ್ಳುತ್ತಾರೆ. ಫೆಬ್ರವರಿ 1, 1992 ರ ತನಕ ಕೇಂದ್ರಾಡಳಿತ ಪ್ರದೇಶವಾದ ದೆಹಲಿಯ ಆಡಳಿತವನ್ನು ಭಾರತದ ರಾಷ್ಟ್ರಪತಿಯಿಂದ ನೇಮಕಗೊಂಡ ಒಬ್ಬ ಆಡಳಿತಗಾರನ ಮೂಲಕ ಕೇಂದ್ರ ಸರಕಾರ ನೋಡಿಕೊಳ್ಳುತ್ತಿತ್ತು. ಆದರೆ ಸಂಸತ್ತಿನಲ್ಲಿ ಮಾಡಿದ ಸಂವಿಧಾನ ತಿದ್ದುಪಡಿ ಮೂಲಕ ಕೇಂದ್ರಾಡಳಿತ ಪ್ರದೇಶ ದೆಹಲಿಯನ್ನು ಫೆಬ್ರವರಿ 1, 1992 ರಿಂದ ರಾಷ್ಟ್ರೀಯ ರಾಜಧಾನಿ ಪ್ರದೇಶವೆಂದು ಕರೆಯಲಾಗುತ್ತದೆ. 1993ರ ನವೆಂಬರ್‌ನಲ್ಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದ ವಿಧಾನ ಸಭೆಗೆ ಚುನಾವಣೆ ನಡೆಯಿತು.

## 2.4. ನ್ಯಾಯಾಂಗ ವ್ಯವಸ್ಥೆ :

ಸರ್ವೋಚ್ಚ ನ್ಯಾಯಾಲಯ ದೇಶದ ಅತ್ಯುನ್ನತ ನ್ಯಾಯಾಲಯವಾಗಿದೆ. ಉಚ್ಚ ನ್ಯಾಯಾಲಯವು ರಾಜ್ಯದ ನ್ಯಾಯಾಂಗ ವ್ಯವಸ್ಥೆಯ ಮುಖ್ಯಸ್ಥನಂತೆ ಕಾರ್ಯ ನಿರ್ವಹಿಸುತ್ತದೆ. ಪ್ರತಿ ರಾಜ್ಯವನ್ನು ನ್ಯಾಯಾಂಗ ಜಿಲ್ಲೆಗಳಾಗಿ ವಿಭಾಗಿಸಲಾಗಿದೆ. ಅವುಗಳ ಅಧ್ಯಕ್ಷತೆಯನ್ನು ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು ವಹಿಸುತ್ತಾರೆ. ಅವರು ಜಿಲ್ಲೆಯಲ್ಲಿ ಅತ್ಯುನ್ನತ ನ್ಯಾಯಾಧಿಕಾರಿಯಾಗಿರುತ್ತಾರೆ. ಅವರ ಕೆಳಗೆ ಸಿವಿಲ್ ನ್ಯಾಯಾಲಯಗಳಿರುತ್ತವೆ. ಅವುಗಳನ್ನು ವಿವಿಧ ರಾಜ್ಯಗಳಲ್ಲಿ ಮುನಸಿಫ್‌ರು, ಉಪ ನ್ಯಾಯಾಧೀಶರು, ಸಿವಿಲ್ ನ್ಯಾಯಾಧೀಶರು ಹಾಗೂ ಇತರ ಹೆಸರುಗಳಲ್ಲಿ ಕರೆಯುತ್ತಾರೆ. ಹಾಗೆಯೇ ಅಪರಾಧ ನ್ಯಾಯಾಂಗವು ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಮತ್ತು ಪ್ರಥಮ ಹಾಗೂ ದ್ವಿತೀಯ ದರ್ಜೆ ನ್ಯಾಯಾಂಗ ಮ್ಯಾಜಿಸ್ಟ್ರೇಟರನ್ನು ಒಳಗೊಂಡಿರುತ್ತದೆ.

### 2.4.1. ಸರ್ವೋಚ್ಚ ನ್ಯಾಯಾಲಯ

ಸರ್ವೋಚ್ಚ ನ್ಯಾಯಾಲಯಕ್ಕೆ ಮೂಲ, ಅಪೀಲು ವಿಚಾರಿಸುವ ಮತ್ತು ಸಲಹೆ ನೀಡುವ ನ್ಯಾಯಾಧಿಕಾರವಿದೆ. ಅವರ ವಿಶೇಷ ನ್ಯಾಯಾಧಿಕಾರವು ಕೇಂದ್ರ ಮತ್ತು ಒಂದು ಅಥವಾ ಅನೇಕ ರಾಜ್ಯಗಳ ನಡುವಿನ ಅಥವಾ ಎರಡು ಅಥವಾ ಹೆಚ್ಚು ರಾಷ್ಟ್ರಗಳ ನಡುವಿನ ಎಲ್ಲಾ ವಿವಾದಗಳಿಗೆ ಸಂಬಂಧಿಸಿದೆ. ಮೂಲಭೂತ ಹಕ್ಕುಗಳನ್ನು ಕಾರ್ಯ ರೂಪಕ್ಕೆ ತರಲು ಸಂವಿಧಾನವು ಸರ್ವೋಚ್ಚ ನ್ಯಾಯಾಲಯಕ್ಕೆ ವಿಶಾಲ ಮೂಲ ನ್ಯಾಯಾಧಿಕಾರ ನೀಡಿದೆ.

ಸರ್ವೋಚ್ಚ ನ್ಯಾಯಾಲಯದ ಮೇಲ್ಮನವಿ ನ್ಯಾಯಾಧಿಕಾರದ ವ್ಯಾಪ್ತಿಯನ್ನು ಉಚ್ಚ ನ್ಯಾಯಾಲಯದ ಪ್ರಮಾಣ ಪತ್ರದಿಂದ ಅಥವಾ ಉಚ್ಚನ್ಯಾಯಾಲಯ ನೀಡಿ ಯಾವುದೇ ತೀರ್ಪು, ಡಿಕ್ರಿ ಅಥವಾ ಕೊನೆಯ ಆದೇಶಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ಮಂಜೂರು ಮಾಡಿದ ವಿಶೇಷ ರಜೆಯ ಬಗ್ಗೆ ಮೇಲ್ಮನವಿ ಮಾಡಬಹುದು. ಅಂತಹ ಮೊಕದ್ದಮೆಗಳ ಸಂವಿಧಾನವನ್ನು ಅರ್ಥೈಸುವ ಸಿವಿಲ್ ಮತ್ತು ಅಪರಾಧ ಕಾನೂನುಗಳಿಗೆ ಸಂಬಂಧಪಟ್ಟಿರುತ್ತದೆ. ರಾಷ್ಟ್ರಪತಿಯು ಸಾರ್ವಜನಿಕ ಪ್ರಾಮುಖ್ಯತೆಗೆ ಸಂಬಂಧಿಸಿದ ಯಾವುದೇ ವಾಸ್ತವ ಸಂಗತಿಯ ಅಥವಾ ಕಾನೂನಿನ ಪ್ರಶ್ನೆ ಕುರಿತು ಸರ್ವೋಚ್ಚ ನ್ಯಾಯಾಲಯದ ಜೊತೆ ಸಮಾಲೋಚನೆ ನಡೆಸಬಹುದು. ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಾಧೀಶರು ಹಾಗೂ ಗರಿಷ್ಠ 25 ನ್ಯಾಯಾಧೀಶರು ಇರುತ್ತಾರೆ. ಅವರನ್ನು ರಾಷ್ಟ್ರಪತಿ ನೇಮಕ ಮಾಡುತ್ತಾರೆ. ನ್ಯಾಯಾಧೀಶರು 65 ವರ್ಷ ವಯಸ್ಸಿನ ತನಕ ಅಧಿಕಾರದಲ್ಲಿರುತ್ತಾರೆ.

### 2.4.2 ಉಚ್ಚ ನ್ಯಾಯಾಲಯಗಳು

ದೇಶದಲ್ಲಿ 18 ಉಚ್ಚ ನ್ಯಾಯಾಲಯಗಳಿವೆ. ಮೂರು ಉಚ್ಚ ನ್ಯಾಯಾಲಯೆಗಳಿಗೆ ಒಂದಕ್ಕಿಂತ ಹೆಚ್ಚು ರಾಜ್ಯಗಳ ನ್ಯಾಯಾಧಿಕಾರವಿದೆ. ಮುಂಬಯಿ ಉಚ್ಚ ನ್ಯಾಯಾಲಯದ ವ್ಯಾಪ್ತಿ ಮಹಾರಾಷ್ಟ್ರ, ಗೋವಾ, ದಾದ್ರ ಮತ್ತು ನಾಗರಹೊಳೆ ಮತ್ತು ದಾಮನ್ ಮತ್ತು ದಿಯುಗೆ ವ್ಯಾಪಿಸಿದೆ. ಮೊದಲ ಅಸ್ಸಾಂ ಉಚ್ಚ ನ್ಯಾಯಾಲಯವೆಂದು ಕರೆಯಲ್ಪಡುತ್ತಿದ್ದ ಗುಹಾಹತಿ ಉಚ್ಚ ನ್ಯಾಯಾಲಯದ ವ್ಯಾಪ್ತಿ ಅಸ್ಸಾಂ, ಮಣಿಪುರ, ಮೇಘಾಲಯ, ನಾಗಲ್ಯಾಂಡ್, ತ್ರಿಪುರ, ಮಿಜೋರಾಂ ಮತ್ತು ಅರುಣಾಚಲ ಪ್ರದೇಶ ರಾಜ್ಯಗಳಿಗೆ ವಿಸ್ತರಿಸಿದೆ. ಪಂಜಾಬ್ ಮತ್ತು ಹರ್‍ಯಾಣ ಉಚ್ಚ ನ್ಯಾಯಾಲಯದ ವ್ಯಾಪ್ತಿ ಪಂಜಾಬ್, ಹರ್‍ಯಾಣ ಮತ್ತು ಚಂಡೀಗಡಗಳಿಗೆ ವ್ಯಾಪಿಸಿದೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ದೆಹಲಿಗೆ ಮಾತ್ರ ಅವರದ್ದೇ ಆದ ಉಚ್ಚ ನ್ಯಾಯಾಲಯವಿದೆ. ಇತರ ಕೇಂದ್ರಾಡಳಿತ ಪ್ರದೇಶಗಳು ವಿವಿಧ ರಾಜ್ಯ ಉಚ್ಚ ನ್ಯಾಯಾಲಯಗಳ ನ್ಯಾಯಾಧಿಕಾರದ ವ್ಯಾಪ್ತಿಗೆ ಸೇರುತ್ತವೆ.

ರಾಷ್ಟ್ರಪತಿಯವರು ಭಾರತದ ಮುಖ್ಯ ನ್ಯಾಯಾಧೀಶರು ಹಾಗೂ ರಾಜ್ಯದ ರಾಜ್ಯಪಾಲರ ಜೊತೆ ಸಮಲೋಚನೆ ನಡೆಸಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ನೇಮಕ ಮಾಡುತ್ತಾರೆ. ಪ್ರತಿಯೊಂದು ಉಚ್ಚ ನ್ಯಾಯಾಲಯಕ್ಕೆ ತನ್ನ ನ್ಯಾಯಾಧಿಕಾರದ ವ್ಯಾಪ್ತಿಗೆ ಬರುವ ಎಲ್ಲಾ ನ್ಯಾಯಾಲಯಗಳ ಮೇಲ್ವಿಚಾರಣೆ ಮಾಡುವ ಅಧಿಕಾರಗಳಿರುತ್ತವೆ. ಉಚ್ಚ ನ್ಯಾಯಾಲಯದ ನ್ಯಾಯಾಧೀಶರು 62 ವರ್ಷ ವಯಸ್ಸಾದಾಗ ನಿವೃತ್ತರಾಗುತ್ತಾರೆ. ಒಂದು ಉಚ್ಚ ನ್ಯಾಯಾಲಯದ ನ್ಯಾಯಾಧಿಕಾರ ಮತ್ತು ಕಾನೂನುಗಳನ್ನು ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳು ಬದಲಾಯಿಸಬಹುದು. ಮುಂಬಯಿ, ಕೋಲ್ಕತ್ತ ಮತ್ತು ಮೂಲ ಮತ್ತು ಮೇಲ್ ಮನವಿ ನ್ಯಾಯಾಧಿಕಾರಗಳಿರುತ್ತವೆ, ರೂ. 25,000 ಅಥವಾ ಹೆಚ್ಚು ಮೌಲ್ಯದ ವಿಷಯಗಳಿರುವ ಮೂಲ ನ್ಯಾಯಾಧಿಕಾರದ ಮೊಕದ್ದಮೆಗಳನ್ನು ನೇರವಾಗಿ ಉಚ್ಚ ನ್ಯಾಯಾಲಯದಲ್ಲಿ ಹೂಡಬಹುದು. ಹೆಚ್ಚಿನ ಉಚ್ಚ ನ್ಯಾಯಾಲಯಗಳಿಗೆ ಕೇವಲ ಮೇಲ್ ಮನವಿ ನ್ಯಾಯಾಧಿಕಾರವಿರುತ್ತದೆ. ಉಚ್ಚ ನ್ಯಾಯಾಲಯವಲ್ಲದೆ ಲೋಕ ಅದಾಲತ್‌ಗಳು ಕೂಡಾ ಇವೆ. ಅವು ಸ್ವಯಂಸೇವಾ ಸಂಸ್ಥೆಗಳಾಗಿದ್ದು ಸಮಾಲೋಚನೆ ವಿಧಾನದ ಮೂಲಕ ವಿವಾದಗಳನ್ನು ಪರಿಹರಿಸುತ್ತವೆ.

## 2.5. ಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನಬದ್ಧ ಸಂಬಂಧಗಳು

ಸಂವಿಧಾನದ ಪ್ರಕಾರ ಇಡೀ ಭಾರತಕ್ಕೆ ಅಥವಾ ದೇಶದ ಯಾವುದೇ ಪ್ರದೇಶಕ್ಕೆ ಕಾನೂನುಗಳನ್ನು ಮಾಡುವ ಅಧಿಕಾರ ಸಂಸತ್ತಿಗಿದೆ. ರಾಜ್ಯ ಶಾಸಕಾಂಗಗಳಿಗೆ ರಾಜ್ಯಗಳಿಗೆ ಸಂಬಂಧಿಸಿದ ಕಾನೂನುಗಳನ್ನು ರಚಿಸುವ ಅಧಿಕಾರವಿದೆ. ಯಾವ ವಿಷಯಗಳಲ್ಲಿ ಕಾನೂನುಗಳನ್ನು ಜಾರಿಗೆ ತರಬಹುದು ಎಂಬುದನ್ನು ಸಂವಿಧಾನದ ಏಳನೇ ಪರಿಚೇದವನ್ನು ವ್ಯಾಖ್ಯಾನಿಸಲಾಗಿದೆ.

'ಕೇಂದ್ರ ಪಟ್ಟಿ' ಎಂದು ಕರೆಯಲ್ಪಡುವ ಮೊದಲ ಪಟ್ಟಿಯಲ್ಲಿರುವ ವಿಷಯಗಳ ಬಗೆಗೆ ಕಾಯಿದೆ ರಚಿಸುವ ವಿಶೇಷ ಅಧಿಕಾರ ಸಂಸತ್ತಿಗಿದೆ. ಈ ಪಟ್ಟಿಯಲ್ಲಿ ರಕ್ಷಣೆ, ವಿದೇಶಾಂಗ ವ್ಯವಹಾರ, ನೋಟು, ಆದಾಯ ತೆರಿಗೆ, ಅಬಕಾರಿ ಸುಂಕ, ರೈಲ್ವೆ, ಹಡಗು, ಅಂಚೆ ಮತ್ತು ಟೆಲಿಗ್ರಾಫ್ ಮುಂತಾದ ಕ್ಷೇತ್ರಗಳು ಸೇರಿವೆ.

'ರಾಜ್ಯಪಟ್ಟಿ' ಎಂದು ಕರೆಯಲ್ಪಡುವ ಎರಡನೇ ಪಟ್ಟಿಯಲ್ಲಿರುವ ವಿಷಯಗಳ ಬಗೆಗೆ ಕಾಯಿದೆ ರಚಿಸುವ ವಿಶೇಷ ಅಧಿಕಾರ ರಾಜ್ಯ ಶಾಸಕಾಂಗಗಳಿಗಿವೆ. ಈ ಪಟ್ಟಿಯಲ್ಲಿ ಸಾರ್ವಜನಿಕ ಸುವ್ಯವಸ್ಥೆ, ಪೋಲೀಸ್, ಸಾರ್ವಜನಿಕ ಆರೋಗ್ಯ, ಸಂಪರ್ಕ, ಕೃಷಿ, ಲಾಟರಿಗಳು, ಮನರಂಜನಾ ಮತ್ತು ಆಸ್ತಿ ತೆರಿಗೆಗಳು, ಮಾರಾಟ ತೆರಿಗೆ ಮತ್ತು ಆಕ್ಟ್ರಾಯ್ ಮುಂತಾದ ವಿಷಯಗಳು ಸೇರಿವೆ.

'ಸಮವರ್ತಿ ಪಟ್ಟಿ' ಎಂದು ಕರೆಯಲ್ಪಡುವ ಸಂವಿಧಾನದ ಮೂರನೇ ಪಟ್ಟಿಯಲ್ಲಿರುವ ವಿಷಯಗಳ ಬಗೆಗೆ ಕಾಯಿದೆ ರಚಿಸುವ ಅಧಿಕಾರ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳು ಎರಡಕ್ಕೂ ಇದೆ. ಈ ಪಟ್ಟಿಯಲ್ಲಿ ವಿದ್ಯುತ್, ಪತ್ರಿಕೆಗಳು, ಅಪರಾಧ ಕಾನೂನು, ಮದುವೆ ಮತ್ತು ವಿಚ್ಛೇದನ, ಛಾಪಾ ಕಾಗದ ಸುಂಕಗಳು, ವ್ಯಾಪಾರ ಸಂಘಟನೆಗಳು, ಬೆಲೆ ನಿಯಂತ್ರಣ ಮುಂತಾದ ವಿಷಯಗಳು ಸೇರಿವೆ.

ಯಾವುದೇ ಪ್ರಜಾಪ್ರಭುತ್ವದಂತೆ ರಾಜಕೀಯ ಪಕ್ಷಗಳು ಭಾರತೀಯ ಸಮಾಜ ಮತ್ತು ಪ್ರದೇಶಗಳ ವಿವಿಧ ವರ್ಗಗಳನ್ನು ಪ್ರತಿನಿಧಿಸುತ್ತವೆ. ಅವುಗಳ ಮುಖ್ಯ ಮೌಲ್ಯಗಳು ಭಾರತೀಯ ರಾಜಕೀಯ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸರಕಾರದ ಕಾರ್ಯಾಂಗ ಮತ್ತು ಶಾಸಕಾಂಗ ಎರಡನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ನಡೆಸುತ್ತಾರೆ. ಅವರು ಚುನಾವಣೆಗಳ ಮೂಲಕ ಚುನಾಯಿಸಲ್ಪಡುತ್ತಾರೆ. ಚುನಾವಣೆ ಪ್ರಕ್ರಿಯೆ ಮೂಲಕ ಜನರು ಆಯ್ಕೆ ಮಾಡಿದ ಜನ ಪ್ರತಿನಿಧಿಗಳಲ್ಲಿ ಬಹುಮತ ಪಡೆದ ಪಕ್ಷ ಅಥವಾ ಸಮ್ಮಿಶ್ರ ಸರಕಾರ ಆಡಳಿತ ನಡೆಸುತ್ತದೆ.

ಭಾರತ ಬಹುಪಕ್ಷ ಪದ್ಧತಿ ಹೊಂದಿದ್ದು, ಇಲ್ಲಿ ಅನೇಕ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳಿವೆ. ಪ್ರಾದೇಶಿಕ ಪಕ್ಷವೊಂದು ಬಹುಮತ ಪಡೆದು, ಒಂದು ನಿರ್ದಿಷ್ಟ ರಾಜ್ಯದಲ್ಲಿ ಆಡಳಿತ ನಡೆಸಬಹುದು. ಒಂದು ಪಕ್ಷಕ್ಕೆ ನಾಲ್ಕಕ್ಕಿಂತ ಹೆಚ್ಚು ರಾಜ್ಯಗಳಲ್ಲಿ

ಪ್ರತಿನಿಧಿಗಳಿದ್ದರೆ ಅದನ್ನು ರಾಷ್ಟ್ರೀಯ ಪಕ್ಷವೆಂದು ಕರೆಯುತ್ತಾರೆ. ಸ್ವತಂತ್ರ ಭಾರತದ ಇತಿಹಾಸದ ಹೆಚ್ಚಿನ ಭಾಗ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಆಡಳಿತ ಹೊಂದಿತ್ತು. 1970ರ ದಶಕ ಹಾಗೂ 1980ರ ದಶಕದ ಕೊನೆಯ ಅವಧಿಯ ಎರಡು ಅವಧಿಗಳನ್ನು ಹೊರತು ಪಡಿಸಿದರೆ ಕಾಂಗ್ರೆಸ್ ಪಕ್ಷವು ಸಂಸತ್ತಿನಲ್ಲಿ ಬಹುಮತ ಪಡೆದಿತ್ತು. ಈ ಆಡಳಿತಕ್ಕೆ 1977 ರಿಂದ 1980ರ ಅವಧಿಯಲ್ಲಿ ಜನತಾ ಪಕ್ಷ ನೇತೃತ್ವದ ಸಮ್ಮಿಶ್ರ ಸರಕಾರ ಚುನಾವಣೆ ಗೆದ್ದ ಕಾರಣ ತಡೆಯುಂಟಾಯಿತು. ಇದಕ್ಕೆ ಕಾರಣ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಘೋಷಿಸಿದ ತುರ್ತು ಪರಿಸ್ಥಿತಿ ಬಗ್ಗೆ ಸಾರ್ವಜನಿಕರು ತೋರಿದ ಅಸಮಧಾನ 1989ರಲ್ಲಿ ಜನತಾ ದಳ ಚುನಾವಣೆಯಲ್ಲಿ ಗೆದ್ದು ಕೇವಲ ಎರಡು ವರ್ಷಗಳ ತನಕ ಅಧಿಕಾರ ನಡೆಸಲು ಮಾತ್ರ ಶಕ್ತವಾಯಿತು.

1996 ಮತ್ತು 1998ರ ನಡುವಿನ ಅವಧಿಯಲ್ಲಿ ದೇಶದಲ್ಲಿ ರಾಜಕೀಯ ಅಸ್ಥಿರತೆ ತಲೆದೋರಿತು. ಮೊದಲಿಗೆ ಬಲಪಂಥೀಯ ರಾಷ್ಟ್ರೀಯವಾದಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಸರಕಾರ ರಚಿಸಿತು. ನಂತರ ಸಂಯುಕ್ತ ರಂಗ ಎಂಬ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂತು. 1998ರಲ್ಲಿ ಬಿಜೆಪಿ ಸಣ್ಣ ಪ್ರಾದೇಶಿಕ ಪಕ್ಷಗಳನ್ನು ಸೇರಿಸಿ ರಾಷ್ಟ್ರೀಯ ಪ್ರಜಾತಂತ್ರ ಮೈತ್ರಿ ಸರಕಾರ ರಚಿಸುವ ಮೂಲಕ ಪೂರ್ಣ ಐದು ವರ್ಷಗಳ ಅವಧಿ ಪೂರೈಸಿದ ಮೊದಲ ಕಾಂಗ್ರೇಸೇತರ ಮತ್ತು ಸಮ್ಮಿಶ್ರ ಸರಕಾರ ಎಂಬ ಕೀರ್ತಿಗೆ ಪಾತ್ರವಾಯಿತು. 2004ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗೆಲ್ಲುವುದರ ಮೂಲಕ ಸಂಯುಕ್ತ ಪ್ರಗತಿಪರ ಮೈತ್ರಿ ಸರಕಾರವನ್ನು ರಚಿಸಿತು. ಅದನ್ನೇ ಎಡಪಕ್ಷಗಳು ಹಾಗೂ ಬಿಜೆಪಿ ವಿರೋಧಿಸುವ ಪಕ್ಷಗಳು ಬೆಂಬಲಿಸಿದವು.

## 2.6. ಸಾರಾಂಶ :

ಭಾರತದ ರಾಜಕೀಯವು ಸಂಯುಕ್ತ ಸಂಸದೀಯ ಪ್ರಾತಿನಿಧಿಕ ಪ್ರಜಾಪ್ರಭುತ್ವ ಗಣರಾಜ್ಯದ ಚೌಕಟ್ಟಿನಲ್ಲಿದೆ. ಇದರಲ್ಲಿ ಭಾರತದ ಪ್ರಧಾನ ಮಂತ್ರಿ ಸರಕಾರ ಹಾಗೂ ಬಹು ಪಕ್ಷ ಪದ್ಧತಿಯ ಮುಖ್ಯಸ್ಥನಾಗಿರುತ್ತಾನೆ. ಕಾರ್ಯಾಂಗದ ಅಧಿಕಾರವನ್ನು ಸರಕಾರ ಚಲಾಯಿಸುತ್ತದೆ. ಒಕ್ಕೂಟ ವ್ಯವಸ್ಥೆಯ ಶಾಸನಬದ್ಧ ಅಧಿಕಾರ ಸರಕಾರ ಮತ್ತು ಭಾರತದ ಸಂಸತ್ತಿನ ಎರಡು ಸದನಗಳಿಗೂ ಇದೆ. ನ್ಯಾಯಾಂಗವು ಕಾರ್ಯಾಂಗ ಮತ್ತು ಶಾಸಕಾಂಗದಿಂದ ಮುಕ್ತವಾಗಿದೆ.

ರಾಷ್ಟ್ರಪತಿಯು ಕೇಂದ್ರ ಕಾರ್ಯಾಂಗದ ಸಂವಿಧಾನಿಕ ಮುಖ್ಯಸ್ಥರಾಗಿರುತ್ತಾರೆ. ಆದರೆ ನಿಜವಾದ ಅಧಿಕಾರ ಪ್ರಧಾನ ಮಂತ್ರಿ ನೇತೃತ್ವದ ಮಂತ್ರಿ ಮಂಡಲದ ಕೈಯಲ್ಲಿರುತ್ತದೆ. ಸಂವಿಧಾನದ 74(1) ವಿಧಿಯು ರಾಷ್ಟ್ರಪತಿಗೆ ಸಹಕರಿಸಲು ಹಾಗೂ ಸಲಹೆ ನೀಡಲು ಪ್ರಧಾನ ಮಂತ್ರಿ ನೇತೃತ್ವದ ಮಂತ್ರಿ ಮಂಡಲವಿರಬೇಕೆಂದು ತಿಳಿಸುತ್ತದೆ. ರಾಷ್ಟ್ರಪತಿಯು ಆ ಸಲಹೆಗಳಿಗನುಗುಣವಾಗಿ ತನ್ನ ಅಧಿಕಾರಗಳನ್ನು ಚಲಾಯಿಸುತ್ತಾರೆ. ಮಂತ್ರಿ ಮಂಡಲವು ಜನ ಪ್ರತಿನಿಧಿ ಸದನವಾದ ಲೋಕಸಭೆಗೆ ಜವಾಬ್ದಾರವಾಗಿರಬೇಕು.

ರಾಜ್ಯಗಳಲ್ಲಿ ರಾಷ್ಟ್ರಪತಿಯ ಪ್ರತಿನಿಧಿಯಾಗಿ ರಾಜ್ಯಪಾಲರು ಕಾರ್ಯಾಂಗದ ಮುಖ್ಯಸ್ಥರಾಗಿರುತ್ತಾರೆ. ಆದರೆ ನಿಜವಾದ ಕಾರ್ಯಾಂಗದ ಅಧಿಕಾರಿ ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಲದ ಕೈಯಲ್ಲಿರುತ್ತದೆ. ರಾಜ್ಯದ ಮಂತ್ರಿಮಂಡಲವು ರಾಜ್ಯದ ಚುನಾಯಿತ ವಿಧಾನಸಭೆಗೆ ಒಟ್ಟಾಗಿ ಜವಾಬ್ದಾರರಾಗಿರಬೇಕು.

ಸರ್ವೋಚ್ಚ ನ್ಯಾಯಾಲಯ ದೇಶದ ಅತ್ಯುನ್ನತ ನ್ಯಾಯಾಲಯ. ಉಚ್ಚ ನ್ಯಾಯಾಲಯವು ರಾಜ್ಯದ ನ್ಯಾಯಾಂಗ ಅಧಿಕಾರದ ಮುಖ್ಯಸ್ಥನಾಗಿ ಕಾರ್ಯ ನಿರ್ವಹಿಸುತ್ತದೆ. ಪ್ರತಿಯೊಂದು ರಾಜ್ಯವನ್ನು ನ್ಯಾಯಾಂಗ ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಅವುಗಳ ಮುಖ್ಯಸ್ಥರಾಗಿ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು ಕಾರ್ಯ ನಿರ್ವಹಿಸುತ್ತಾರೆ. ಅವರು ಒಂದು ಜಿಲ್ಲೆಯ ಅತ್ಯುನ್ನತ ನ್ಯಾಯಾಂಗ ಅಧಿಕಾರಿಯಾಗಿರುತ್ತಾರೆ. ಅವರ ಕೆಳಗೆ ಸಿವಿಲ್ ನ್ಯಾಯಾಲಯಗಳಿರುತ್ತವೆ. ಅವುಗಳನ್ನು ನ್ಯಾಯಾಧೀರನ್ನು ವಿವಿಧ ರಾಜ್ಯಗಳಲ್ಲಿ ಮುನ್ಸಿಫರು, ಉಪನ್ಯಾಯಧೀಶರು, ಸಿವಿಲ್ ನ್ಯಾಯಾಧೀಶರು ಮತ್ತಿತರ ಹೆಸರುಗಳಲ್ಲಿ ಕರೆಯುತ್ತಾರೆ. ಅದರಂತೆ ಅಪರಾಧ ನ್ಯಾಯಾಂಗದಲ್ಲಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಮತ್ತು ಪ್ರಥಮ ಮತ್ತು ದ್ವಿತೀಯ ದರ್ಜೆ ನ್ಯಾಯಾಂಗ ಮ್ಯಾಜಿಸ್ಟ್ರೇಟ್‌ಗಳಿರುತ್ತಾರೆ.

ಸಂವಿಧಾನದ ಪ್ರಕಾರ ಇಡೀ ಭಾರತ ದೇಶಕ್ಕೆ ಅಥವಾ ದೇಶದ ಯಾವುದೇ ಪ್ರದೇಶಕ್ಕೆ ಕಾನೂನುಗಳನ್ನು ರಚಿಸುವ ಅಧಿಕಾರ ಸಂಸತ್ತಿಗಿದೆ. ರಾಜ್ಯಗಳಿಗೆ ಸಂಬಂಧಿಸಿದ ಕಾನೂನುಗಳನ್ನು ರಚಿಸುವ ಅಧಿಕಾರ ರಾಜ್ಯ ಶಾಸಕಾಂಗಗಳಿಗಿರುತ್ತದೆ. ಕಾಯಿದೆಗಳನ್ನು ರಚಿಸುವ ಮತ್ತು ಜಾರಿಗೆ ತರುವ ವಿಷಯಗಳನ್ನು ಸಂವಿಧಾನದ ಎಂಟನೇ ಪರಿಚೇದದಲ್ಲಿ ಸ್ಪಷ್ಟಪಡಿಸಲಾಗಿದೆ. 'ಕೇಂದ್ರ ಪಟ್ಟಿ' ಎಂದು ಕರೆಯಲ್ಪಡುವ ಮೊದಲ ಪಟ್ಟಿಯಲ್ಲಿರುವ ವಿಷಯಗಳ ಬಗೆಗೆ ಕಾಯಿದೆಗಳನ್ನು ರಚಿಸುವ ವಿಶೇಷ ಹಕ್ಕು ಸಂಸತ್ತಿಗಿದೆ. 'ರಾಜ್ಯಪಟ್ಟಿ' ಎಂದು ಕರೆಯಲ್ಪಡುವ ಎರಡನೇ ಪಟ್ಟಿಯಲ್ಲಿರುವ ವಿಷಯಗಳ ಬಗೆಗೆ ಕಾಯಿದೆಗಳನ್ನು ರಚಿಸುವ ವಿಶೇಷ ಹಕ್ಕು ರಾಜ್ಯ ಶಾಸಕಾಂಗಗಳಿಗಿದೆ. 'ಸಮವರ್ತಿ ಪಟ್ಟಿ' ಎಂದು ಕರೆಯಲ್ಪಡುವ ಸಂಸತ್ತಿನ ಮೂರನೇ ಪಟ್ಟಿಯಲ್ಲಿರುವ ವಿಷಯಗಳ ಬಗೆಗೆ ಕಾಯಿದೆಗಳನ್ನು ರಚಿಸುವ ಅಧಿಕಾರ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳು ಎರಡಕ್ಕೂ ಇದೆ.

ಸ್ವತಂತ್ರ ಭಾರತದ ಚರಿತ್ರೆ ಹೆಚ್ಚಿನ ಭಾಗ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಆಡಳಿತಕ್ಕೆ ಒಳಪಟ್ಟಿತ್ತು. 1996 ಮತ್ತು 1998 ರ ನಡುವಿನ ಅವಧಿಯಲ್ಲಿ ದೇಶದಲ್ಲಿ ರಾಜಕೀಯ ಅಸ್ಥಿರತೆ ತಲೆದೋರಿತು. ಮೊದಲು ಭಾರತೀಯ ಜನತಾಪಕ್ಷ ನೇತೃತ್ವದ ಎನ್‌ಡಿಎ ಸರಕಾರ ಆಡಳಿತ ನಡೆಸಿದರೆ, ನಂತರ ಸಂಯುಕ್ತ ರಂಗ ಸರಕಾರ ಅಲ್ಪ ಅವಧಿಯ ಅಧಿಕಾರ ನಡೆಸಿತು. 1998ರಲ್ಲಿ ಬಿಜೆಪಿ ಸಣ್ಣ ಪ್ರಾದೇಶಿಕ ಪಕ್ಷಗಳನ್ನು ಸೇರಿಸಿ ಎನ್‌ಡಿಎ ಒಕ್ಕೂಟ ರಚಿಸಿ ಆಡಳಿತ ನಡೆಸುವ ಮೂಲಕ ಪೂರ್ಣ ಐದು ವರ್ಷ ಅಧಿಕಾರದ ಅವಧಿ ಪೂರೈಸಿದ ಮೊದಲ ಕಾಂಗ್ರೆಸೇತರ ಮತ್ತು ಸಮ್ಮಿಶ್ರ ಸರಕಾರ ಎಂಬ ಕೀರ್ತಿಗೆ ಪಾತ್ರವಾಯಿತು. 2004ರ ಚುನಾವಣೆಯಲ್ಲಿ ಹೆಚ್ಚು ಸೀಟುಗಳನ್ನು ಪಡೆಯುವುದರ ಮೂಲಕ ಎಡ ಪಕ್ಷಗಳು ಮತ್ತು ಬಿಜೆಪಿ ವಿರೋಧಿ ಪಕ್ಷಗಳ ಬೆಂಬಲ ಪಡೆದು ಸಂಯುಕ್ತ ಪ್ರಗತಿಪರ ಮೈತ್ರಿಕೂಟ ಎಂಬ ಹೆಸರಲ್ಲಿ ಸರಕಾರ ರಚಿಸಿತು.

## 2.7. ನಿಮ್ಮ ಪ್ರಗತಿ ಪರಿಶೀಲನೆ :

**ಸೂಚನೆ :** ನಿಮ್ಮ ಉತ್ತರಗಳನ್ನು ಘಟಕದಲ್ಲಿ ನೀಡಿರುವ ಉತ್ತರಗಳೊಂದಿಗೆ ತುಲನೆ ಮಾಡಿ

1. ಭಾರತೀಯ ರಾಜಕೀಯ ವ್ಯವಸ್ಥೆಯ ಸ್ವರೂಪವನ್ನು ವಿವರಿಸಿ.
2. ಭಾರತದಲ್ಲಿ ಯಾವ ಮೂಲಭೂತ ಆಡಳಿತ ರಚನೆ ಇದೆ.
3. ಭಾರತದ ನ್ಯಾಯಾಂಗ ವ್ಯವಸ್ಥೆಯನ್ನು ವಿವರಿಸಿ.
4. ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನಬದ್ಧ ಸಂಬಂಧಗಳನ್ನು ಚರ್ಚಿಸಿ.

## 2.8. ಹೆಚ್ಚಿನ ಓದಿಗಾಗಿ :


ಕಿರಣ್ ಪ್ರಸಾದ್ (ಸಂ) -ಪೊಲಿಟಿಕಲ್ ಕಮ್ಯುನಿಕೇಷನ್ : ದಿ ಇಂಡಿಯನ್ ಎಕ್ಸ್‌ಪಿರಿಯನ್ಸ್, ಸಂ. 1 & 2.

ಆರ್. ಚಂದ್ರ -ಐಡಿಯಾಲಜಿ ಅಂಡ್ ಪೊಲಿಟಿಕ್ಸ್ ಇನ್ ಮಾಡರ್ನ್ ಇಂಡಿಯಾ.

ಎಂ.ಬಿಪಿನ್ ಚಂದ್ರ ಮುಖರ್ಜಿ ಮತ್ತು ಎ. ಮುಖರ್ಜಿ-ಇಂಡಿಯಾ ಆಫ್ಟರ್ ಇಂಡಿಪೆಂಡೆನ್ಸ್

ಆರ್.ವೊಹ್ರಾ-ದಿ ಮೇಕಿಂಗ್ ಆಫ್ ಇಂಡಿಯಾ

ರೊಮಿಲಾ ಥಾಪರ್ (ಸಾ)-ಇಂಡಿಯಾ ಎನದರ್ ಮಿಲೇನಿಯಂ ?

# ಘಟಕ 3 : ಉದಾರೀಕರಣ, ಖಾಸಗೀಕರಣ, ಜಾಗತೀಕರಣ

ರಚನೆ :

3.0. ಉದ್ದೇಶಗಳು

3.1. ಪ್ರಸ್ತಾವನೆ

3.2. ಉದಾರೀಕರಣ

3.3. ಖಾಸಗೀಕರಣ

3.4. ಜಾಗತೀಕರಣ

3.5. ಸಾರಾಂಶ

3.6. ನಿಮ್ಮ ಪ್ರಗತಿ ಪರಿಶೀಲನೆ

3.7. ಹೆಚ್ಚಿನ ಓದಿಗಾಗಿ

## 3.0. ಉದ್ದೇಶಗಳು

ವಿಶ್ವದಾದ್ಯಂತ ಸಮಾಜಗಳನ್ನು ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಬದಲಾಯಿಸುತ್ತಿರುವ ಮೂರು ಪ್ರಬಲ ಶಕ್ತಿಗಳೆಂದರೆ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ. ಯಾಕೆಂದರೆ ಈ ಪ್ರಕ್ರಿಯೆಗಳು ಅಂತರ ಸಂಬಂಧ ಹೊಂದಿದ್ದು, ಇವುಗಳನ್ನು ಒಟ್ಟಿಗೆ ಚರ್ಚಿಸಬೇಕು. ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳು ಬಹು ಆಯಾಮದ ಸಿದ್ಧಾಂತಗಳಾಗಿದ್ದು, ಅವು ಕೇವಲ ಸರಕಾರಗಳ ಆರ್ಥಿಕ ವಿಷಯಗಳ ಮೇಲೆ ಪ್ರಭಾವ ಬೀರುವುದಲ್ಲದೆ, ಸಮಾಜಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ವಿಷಯಗಳ ಮೇಲೂ ಪ್ರಭಾವ ಬೀರುತ್ತವೆ ಎಂಬುದನ್ನು ಈ ಘಟಕ ತೋರಿಸಿಕೊಡುತ್ತದೆ. ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು :

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳ ಅರ್ಥವನ್ನು ತಿಳಿಯಬಹುದು.

ಈ ಪ್ರಕ್ರಿಯೆಗಳ ನಡುವಿನ ಅಂತರ ಸಂಬಂಧಗಳನ್ನು ಗುರುತಿಸಬಹುದು.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ಪ್ರಕ್ರಿಯೆಗಳ ಕೆಲವು ಪರಿಣಾಮಗಳನ್ನು ತಿಳಿಯಬಹುದು.

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳ ಧನಾತ್ಮಕ ಮತ್ತು ಋಣಾತ್ಮಕ ವಿಷಯಗಳ ಬಗೆಗೆ ವಿಮರ್ಶಾತ್ಮಕ ನೋಟ ಬೀರಬಹುದು.

## 3.1. ಪ್ರಸ್ತಾವನೆ

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಹುಟ್ಟಿಕೊಂಡ ರಾಷ್ಟ್ರೀಯವಾದ ಪ್ರಕ್ರಿಯೆಯ ವ್ಯತಿರಿಕ್ತ ಪ್ರಕ್ರಿಯೆಯು ಖಾಸಗೀಕರಣ. ಮೊದಲ ಮತ್ತು ಎರಡನೇ ಮಹಾಯುದ್ಧಗಳ ನಂತರ ಪೆಚ್ಚಿನ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಸರಕಾರಗಳು ಅಧಿಕಾರ ಸ್ವೀಕರಿಸಿದ ಸ್ವಲ್ಪದರಲ್ಲೇ ರಾಷ್ಟ್ರೀಯವಾದಗಳ ಒಂದು ಅಲೆ ಹುಟ್ಟಿಕೊಂಡಿತು. ಇತ್ತೀಚೆಗೆ ಸಮಾಜವಾದ ಕ್ಷೀಣಿಸಿದ್ದರಿಂದ ಅಲ್ಲದೆ ರಾಷ್ಟ್ರೀಕೃತ ಉದ್ದಿಮೆಗಳು ಮತ್ತು ಯೋಜಿತ ಅರ್ಥವ್ಯವಸ್ಥೆಗಳಿಗಿಂತ ಸ್ವತಂತ್ರ ಉದ್ದಿಮೆ ದೇಶಗಳ ಸಂಪತ್ತನ್ನು ಹೆಚ್ಚಿಸುತ್ತದೆ ಎಂಬ ಅಭಿಪ್ರಾಯ ಹೆಚ್ಚುತ್ತಿರುವುದರಿಂದ ಖಾಸಗೀಕರಣ ಪ್ರಕ್ರಿಯೆಯು ಹುಟ್ಟಿಕೊಂಡಿತು.

1990ರ ದಶಕದಲ್ಲಿ ಭಾರತದಲ್ಲಿ ರಾಜಕೀಯ ಧ್ರುವೀಕರಣದ ಒಂದು ಸಂಕೀರ್ಣ ಪ್ರಕ್ರಿಯೆ ಮತ್ತು ಉದಾರೀಕರಣ ಅರ್ಥವ್ಯವಸ್ಥೆ ಕಾಣಿಸಿಕೊಂಡಿತು. ಈ ದಶಕದಲ್ಲಿ ಸಮ್ಮಿಶ್ರ ರಾಜಕೀಯ ಹುಟ್ಟಿಕೊಂಡು ಏಕ ರಾಜಕೀಯ ಪಕ್ಷದ ಪ್ರಭುತ್ವ ಅವಸಾನಗೊಂಡು, ರಾಜಕೀಯ ಅಸ್ಥಿರತೆ ಕಾಣಿಸಿಕೊಂಡಿತು, ಇದೇ ದಶಕದಲ್ಲಿ ಭಾರತದ ಆರ್ಥಿಕ ಸಿದ್ಧಾಂತ ಬದಲಾಗಿ, ತೀರಾ ನಿಯಂತ್ರಿತ ಅರ್ಥವ್ಯವಸ್ಥೆಯಿಂದ ಮುಕ್ತ ವ್ಯವಸ್ಥೆಯತ್ತ ತಿರುಗಿತು. 1991ರ ಆಗಸ್ಟ್‌ನಲ್ಲಿ ಹೊಸ ಕೈಗಾರಿಕಾ ಧೋರಣೆಯನ್ನು ಪ್ರಕಟಿಸುವುದರ ಮೂಲಕ ಅರ್ಥವ್ಯವಸ್ಥೆಯ ಉದಾರೀಕರಣ ಪ್ರಕ್ರಿಯೆಯ ಆರಂಭಗೊಂಡಿತು. ಆ ಧೋರಣೆಯು ಕೈಗಾರಿಕಾ ಪರವಾನಿಗೆ ಮತ್ತು ಆಮದು ನಿರ್ಬಂಧಗಳನ್ನು ನಿಷೇಧಿಸಿತು, ಅನೇಕ ಕ್ಷೇತ್ರಗಳಲ್ಲಿದ್ದ ಸರಕಾರಿ ಮೀಸಲಾತಿಯನ್ನು ತೆಗೆದುಹಾಕಿತು ಮತ್ತು ಮೊದಲ ಬಾರಿಗೆ ಹೂಡಿಕೆ ಹಿಂಪಡೆತ ಪರಿಕಲ್ಪನೆಯನ್ನು ಸೀಮಿತ ಸ್ವರೂಪದಲ್ಲಿ ಜಾರಿಗೆ ತಂದಿತು. ಎಂಟನೇ ಪಂಚವಾರ್ಷಿಕ ಯೋಜನೆ (1992-97) ನಂತರ ಅಂತರಾಷ್ಟ್ರೀಯವಾಗಿ ಸ್ಪರ್ಧಿಸಲು ಹಾಗೂ ಪರವಾನಿಗೆ ಮತ್ತು ನಿರ್ಬಂಧಗಳ ಒಂದು ದೀರ್ಘಯುಗಕ್ಕೆ ಮಂಗಳ ಹಾಡಲು ವ್ಯಾಪಾರ, ಉದ್ದಿಮೆ, ತೆರಿಗೆ, ವಿನಿಮಯ ದರ ಮತ್ತು ವಿದೇಶಿ ಆರ್ಥಿಕ ಧೋರಣೆಗಳಿಗೆ ಸಂಬಂಧಿಸಿದಂತೆ ಭಾರತೀಯ ಅರ್ಥವ್ಯವಸ್ಥೆಯಲ್ಲಿ ರಚನಾತ್ಮಕ ಸುಧಾರಣೆಗಳಾದವು.

1990ರ ದಶಕದ ದ್ವಿತೀಯಾರ್ಧದಲ್ಲಿ ಅನೇಕ ರಾಷ್ಟ್ರಗಳ ಅರ್ಥವ್ಯವಸ್ಥೆಗಳಲ್ಲಿ ಬದಲಾವಣೆಯಾದರೂ ಭಾರತೀಯ ಅರ್ಥವ್ಯವಸ್ಥೆ ಸರಾಸರಿ ಶೇ. 5 ರಿಂದ 6 ರಷ್ಟು ಬೆಳವಣಿಗೆ ಕಂಡಿತು. ಇದರಿಂದ ಅದು ವಿಶ್ವದ ಶೀಘ್ರವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಗಳಲ್ಲಿ ಒಂದೆಂಬ ಕೀರ್ತಿಗೆ ಪಾತ್ರವಾಯಿತು. ಉದಾರೀಕರಣದ ಒಂದು ದಶಕದ ನಂತರ ಮತ್ತು ವಿಶ್ವ ಅರ್ಥವ್ಯವಸ್ಥೆಯೊಂದಿಗೆ ಭಾಗಶಃ ಸೇರಿಕೊಂಡ ನಂತರ ಭಾರತೀಯ ಅರ್ಥವ್ಯವಸ್ಥೆಯು ಅಂತರಾಷ್ಟ್ರೀಯ ಮಾರುಕಟ್ಟೆಗಳು ಮತ್ತು ಅಂತರಾಷ್ಟ್ರೀಯ ವ್ಯಾಪಾರದ ಸವಾಲುಗಳನ್ನು ಎದುರಿಸಲು ಸಿದ್ಧತೆ ನಡೆಸುತ್ತಿದೆ.

ಕೃಷಿ ಮತ್ತು ಕೈಗಾರಿಕೆ ಜೊತೆ ಹಿಂದು ಮುಂದು ಸಂಬಂಧಗಳ ಜೊತೆ ಸೇವಾ ಕ್ಷೇತ್ರ ಮುಂದುವರಿದ ಕ್ಷೇತ್ರವಾಗಿ ಮೂಡಿಬಂದ ಕಾರಣ ಭಾರತೀಯ ಅರ್ಥವ್ಯವಸ್ಥೆಯ ರಚನಾತ್ಮಕ ಪರಿವರ್ತನೆ ಶೀಘ್ರಗತಿಯಲ್ಲಿ ಸಾಗಿತು. ಸೇವಾ ಕ್ಷೇತ್ರ ವ್ಯಾಪಾರ, ಹೋಟೆಲು, ಸಾರಿಗೆ ಮತ್ತು ಸಂಪರ್ಕ, ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವ್ಯಾಪರ ಸೇವೆಗಳು ಹಾಗೂ ಸಮುದಾಯ, ಸಾಮಾಜಿಕ ಮತ್ತು ವೈಯಕ್ತಿಕ ಸೇವೆಗಳನ್ನು ಒಳಗೊಂಡಿರುತ್ತದೆ. ಮಾಹಿತಿ ತಂತ್ರಜ್ಞಾನ ಮತ್ತು ದೂರಸಂಪರ್ಕಗಳ ಶೀಘ್ರ ಬೆಳವಣಿಗೆಯಿಂದ ಸೇವಾ ಕ್ಷೇತ್ರದಲ್ಲಿ ಗಮನಾರ್ಹ ಬೆಳವಣಿಗೆ ಸಾಧ್ಯವಾಯಿತು.

ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು ಭವಿಷ್ಯದಲ್ಲಿ ಸೇವೆಗಳ ರಫ್ತಿನಲ್ಲಿ ಪ್ರಮುಖ ಪಾತ್ರ ವಹಿಸಲಿವೆ. ಪ್ರಮುಖ ಮಾಹಿತಿ ತಂತ್ರಜ್ಞಾನ ಆಧಾರಿತ ಉದ್ದಿಮೆಗಳು ಬೆಳೆಯಲು ಈ ಸೇವೆಗಳು ಜವಾಬ್ದಾರವಾಗಿವೆ. ಭಾರತವು ಇಂದು ನೂರಾರು ಟ್ರಾನ್‌ಸ್ಕ್ರಿಪ್ಷನ್ ಮತ್ತುಕಾಲ್‌ಸೆಂಟರ್‌ಗಳ ತಾಣವಾಗಿದೆ. ಅವುಗಳು ವಿಶ್ವದಾದ್ಯಂತವಿರುವ ಗ್ರಾಹಕರ ಪ್ರಶ್ನೆಗಳಿಗೆ ಉತ್ತರಿಸುವ ಸೇವೆಯನ್ನು ಒದಗಿಸುತ್ತದೆ. ಆ ಪ್ರಶ್ನೆಗಳು ಬೇಸ್‌ಬಾಲ್ ಸ್ಕೋರ್‌ಗಳ ಬಗೆಗೆ ವಿಮರ್ಶೆಯಿಂದ ಹಿಡಿದು ಯುರೋಪಿಯನ್ ಸಮುದಾಯದ ಮುನ್ಸಿಪಲ್ ಕಚೇರಿಗಳ ಸಮಸ್ಯೆಗಳ ತನಕ ಇರುತ್ತದೆ. ಅವು ಜರ್ಮನ್ ಉದ್ಯಮ ನಿರ್ವಹಣೆ ವ್ಯವಸ್ಥೆಯ ಮುಖ್ಯ ಗ್ರಾಹಕರುಗಳಾಗಿರುತ್ತಾರೆ. ಇದು ಕೇರಳದ ರಾಜಧಾನಿ ತಿರುವನಂತಪುರದಲ್ಲಿರುವ ಮುಖ್ಯ ಅಭಿವೃದ್ಧಿ ಕೇಂದ್ರಗಳಾಗಿವೆ.

ವಿಶ್ವ ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚುತ್ತಿರುವ ಜಾಗತೀಕರಣ ಕೂಡಾ ಖಾಸಗೀಕರಣ ಪ್ರಕ್ರಿಯೆಯನ್ನು ಬೆಳೆಸುತ್ತಿದೆ. ಅಂತರಾಷ್ಟ್ರೀಯ ವ್ಯಾಪಾರ ಮತ್ತು ಹೂಡಿಕೆಯಲ್ಲಾದ ಹಲವು ದಶಕಗಳ ಶೀಘ್ರ ಬೆಳವಣಿಗೆ ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಸ್ಪರ್ಧೆ ಏರ್ಪಡಲು ಕಾರಣವಾಯಿತು. ಉದ್ಯೋಗ ಸೃಷ್ಟಿಸುವ, ವಾಸ್ತವ ಸಂಬಳ ಹೆಚ್ಚಿಸುವ ಮತ್ತು ಸಂಪತ್ತು ಸೃಷ್ಟಿಸುವ ಸಾಮರ್ಥ್ಯದ ಅನಿವಾರ್ಯ ಅಂಶ ಆದಾಯಿತು. ಜಾಗತೀಕರಣ ಇಂದು ತುಂಬಾ ಚರ್ಚಾರ್ಹ ವಿಷಯವಾಗಿದೆ. ಅದಕ್ಕೆ ಅನೇಕ ಬೆಂಬಲಿಗರು ಇರುವಂತೆಯೇ ಜಾಗತೀಕರಣದ ಧಮನಕಾರಿ ಪರಿಸ್ಥಿತಿಗಳನ್ನು ವಿರೋಧಿಸುವವರೂ ಇದ್ದಾರೆ.

## 3.2. ಉದಾರೀಕರಣ

ಒಂದು ರಾಷ್ಟ್ರೀಯ ಚೌಕಟ್ಟಿನೊಳಗೆ ಉದಾರೀಕರಣ ಅನೇಕ ರೀತಿಯ ಕಾನೂನು ವಿಷಯಗಳನ್ನು ಒಳಗೊಂಡಿದೆ. ಬಂಡವಾಳ ಆಧಾರಿತ ಉದಾರೀಕರಣ, ಮಾರುಕಟ್ಟೆ, ನಿರ್ಧರಿಸಿದ ಬಡ್ಡಿದರಗಳು ಹಾಗೂ ನವ್ಯ ವಿನಿಮಯ ಆಡಳಿತ ಕ್ರಮಗಳು ಹಣಕಾಸಿನ ವ್ಯವಹಾರಗಳ ಜಾಗತೀಕರಣಕ್ಕೆ ಚೌಕಟ್ಟನ್ನು ನಿರ್ಮಿಸುತ್ತವೆ. ವಿದೇಶಿ ನೇರ ಹೂಡಿಕೆ ಹಾಗೂ ಇಲಾಖಾ ಹೂಡಿಕೆ ಹೆಚ್ಚಿನ ಎಲ್ಲಾ ದೇಶಗಳಲ್ಲಿ ಒಳಗೆ ಮತ್ತುಹೊರಗೆ ಹರಿಯುತ್ತಿರುತ್ತದೆ. ಬಡ್ಡಿದರ ಉದಾರೀಕರಣ ವೇಗವಾಗಿ ಮುಂದುವರಿಯುತ್ತಿದೆ ಮತ್ತು ನವ್ಯ ವಿನಿಮಯ ದರಗಳು ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಪ್ರಬಲವಾಗುತ್ತಿದೆ. ಬಂಡವಾಳ ಮುಕ್ತವಾಗಿ ಹರಿಯುತ್ತಿರುವಾಗ, ಅದು ಎಲ್ಲಿ ನೆಲೆಗೊಳ್ಳಬೇಕು ಎಂಬುದರ ಆಯ್ಕೆ ಮಾಡಬೇಕು.

ಆರ್ಥಿಕ ಮತ್ತು ತಾಂತ್ರಿಕ ಬದಲಾವಣೆಗಳ ಹೊಸ ಅಲೆಯು ಪ್ರಾದೇಶಿಕ ಗಡಿಗಳನ್ನು ಒಡೆಯುತ್ತದೆ. ಮತ್ತು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಚ್ಯುತಿ ತರುತ್ತಿದೆ. ಹಣಕಾಸು ಮತ್ತು ವ್ಯಾಪಾರ ಸಮತೋಲನಗಳ ಅಂತಾರಾಷ್ಟ್ರೀಯ ಪರಿಗಣಿಸುವಿಕೆಯಲ್ಲಿ ವ್ಯವಹಾರ

ಮುಖ್ಯವಾಗುತ್ತಿದೆ. ಉದಾರೀಕರಣ ಅನೇಕ ರಾಷ್ಟ್ರೀಯ ಅರ್ಥ ವ್ಯವಸ್ಥೆಗಳು ಅಂತಾರಾಷ್ಟ್ರೀಯ ಚಟುವಟಿಕೆಗಳಿಗೆ ತೆರೆದುಕೊಳ್ಳುವಂತೆ ಮಾಡಿದೆ. ಅದರಲ್ಲಿ ಉತ್ಪನ್ನಗಳು ಮತ್ತು ಭಾಗಗಳನ್ನು ಅತೀ ಸೂಕ್ಷ್ಮವಾದ ಮತ್ತು ದಕ್ಷ ಕಾರ್ಮಿಕರು, ತಂತ್ರಜ್ಞಾನ ಮತ್ತು ಸವಲತ್ತುಗಳನ್ನು ಉಪಯೋಗಿಸಿ ಯಾವುದೇ ದೇಶದಲ್ಲಿ ಉತ್ಪಾದಿಸಬಹುದು ಮತ್ತು ಒಟ್ಟು ಸೇರಿಸಬಹುದು. ಆದ್ದರಿಂದ ವ್ಯವಹಾರ ಹೆಚ್ಚು ಹೆಚ್ಚು ಜಾಗತಿಕವಾಗುತ್ತಿದೆ. ಭಾರತೀಯ ವ್ಯವಹಾರ ಭವಿಷ್ಯ ತಂತ್ರಜ್ಞಾನ, ದೂರಸಂಪರ್ಕ ಮತ್ತು ಪ್ರವಾಸೋದ್ಯಮವನ್ನು ಅವಲಂಬಿಸಿದೆ ಎಂದು ಹೇಳಲಾಗಿದೆ.

ಬಹುರಾಷ್ಟ್ರೀಯ ವ್ಯವಹಾರವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಉದಾರೀಕರಣದ ರಾಷ್ಟ್ರೀಯ ಕಾಯಿದೆ ಮಾಡಲಾಗುತ್ತದೆ. ವಿದೇಶಿ ನೇರ ಹೂಡಿಕೆಗೆ ಮೊದಲು ಮುಚ್ಚಿದ ಉದ್ದಿಮೆಗಳನ್ನು ತೆರೆಯಲಾಗಿದೆ, ದೇಶದ ಆಸ್ತಿಯನ್ನು ಖಾಸಗೀಕರಣ ಮಾಡಲಾಗಿದೆ, ಆಡಳಿತಾತ್ಮಕ ಒಪ್ಪಿಗೆಗಳು ಮತ್ತು ಸುಂಕ ವಿಧಾನಗಳನ್ನು ಸರಳಗೊಳಿಸಲಾಗಿದೆ. ಮತ್ತು ಪ್ರೋತ್ಸಾಹಕಗಳು ರಿಯಾಯಿತಿಗಳನ್ನು ಪರಿಚಯಿಸಲಾಗಿದೆ. 1996ರಲ್ಲಿ 65 ದೇಶಗಳಲ್ಲಿ ವಿದೇಶಿ ನೇರ ಹೂಡಿಕೆಯ ನಿಯಂತ್ರಣಾ ಚೌಕಟ್ಟಿನಲ್ಲಿ 98 ಉದಾರೀಕರಣದ ಬದಲಾವಣೆಗಳನ್ನು ಮಾಡಲಾಯಿತು.

1991ರ ಆಗಸ್ಟ್‌ನಲ್ಲಿ ಭಾರತೀಯ ಅರ್ಥವ್ಯವಸ್ಥೆ ಉದಾರೀಕರಣಗೊಂಡ ನಂತರ ವ್ಯಾಪಾರ, ಉದ್ದಿಮೆ, ತೆರಿಗೆ ಕ್ರಮ, ವಿನಿಮಯ ದರ, ಬಂಡವಾಳ ಮಾರುಕಟ್ಟೆ ಮತ್ತು ಅಂತಾರಾಷ್ಟ್ರೀಯವಾಗಿ ಸ್ಪರ್ಧಾತ್ಮಕವನ್ನಾಗಿ ಮಾಡುವ ವಿದೇಶಿ ಆರ್ಥಿಕ ಧೋರಣೆಗಳನ್ನು ರಚನಾತ್ಮಕ ಸುಧಾರಣೆಗಳಾದವು. ಅಭಿವೃದ್ಧಿಗಾಗಿ ಹಣಕಾಸು ಒದಗಿಸಲು 1991ರ ಆಗಸ್ಟ್‌ನಲ್ಲಿ ಹೊಸ ಕೈಗಾರಿಕಾ ಧೋರಣೆ ಪ್ರಕಟಿಸಿ, ಕೈಗಾರಿಕಾ ಪರವಾನಿಗೆ ನಿಷೇಧಿಸಿತು, ಸರಕಾರಕ್ಕೆ ಮೀಸಲಾದ ಅನೇಕ ಕ್ಷೇತ್ರಗಳಲ್ಲಿ ರದ್ದು ಪಡಿಸಲಾಯಿತು ಮತ್ತು ಸೀಮಿತ ಸ್ವರೂಪದಲ್ಲಿ ಹೂಡಿಕೆ ಹಿಂಪಡೆತ ಪರಿಕಲ್ಪನೆಯನ್ನು ಮೊದಲ ಬಾರಿಗೆ ಜಾರಿಗೆ ತರಲಾಯಿತು. ಯುಎನ್‌ಸಿಟಿಎಡಿಯ 'ವಿಶ್ವ ಹೂಡಿಕೆ ವರದಿ 2005'ಯ ಪ್ರಕಾರ ಜಾಗತಿಕವಾಗಿ ವಿದೇಶಿ ನೇರ ಹೂಡಿಕೆಯ ಮುಖ್ಯ ಸ್ಥಾನಗಳಲ್ಲಿ ಚೀನಾ ಬಿಟ್ಟರೆ ಭಾರತ ಎರಡನೇ ಸ್ಥಾನ ಪಡೆದಿದೆ ಮತ್ತು ಅಮೇರಿಕಾದಿಂದ ಮುಂದಿದೆ. ಅದು 2004ರಲ್ಲಿ 5.3 ಬಿಲಿಯನ್ ಡಾಲರ್ ಮೌಲ್ಯದ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸಿದೆ. ಸರಾಸರಿ ಶೇ. 5ರಿಂದ 6ರಷ್ಟು ಬೆಳವಣಿಗೆ ದರ ಹೊಂದಿರುವ ಭಾರತೀಯ ಅರ್ಥವ್ಯವಸ್ಥೆ ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಗಳಲ್ಲಿ ಒಂದು ಎಂದು ಹೆಸರು ಗಳಿಸಿದೆ.

## 3.3. ಖಾಸಗೀಕರಣ

ಖಾಸಗೀಕರಣ ಪ್ರಯತ್ನಗಳು ದೇಶದಿಂದ ದೇಶಕ್ಕೆ ಭಿನ್ನವಾಗಿದ್ದರೂ ದೇಶದ ಸಂಪನ್ಮೂಲಗಳನ್ನು ಖಾಸಗೀಕರಣ ಮಾಡುವ ನಿರ್ಧಾರಗಳಲ್ಲಿ ಒಂದು ಬಲವಾದ ಸಾಮಾನ್ಯ ಆರ್ಥಿಕ ಚಿಂತನೆ ಅಡಗಿದೆ. ಸಾಮಾನ್ಯವಾಗಿ ಏಳು ಉದ್ದೇಶಗಳಲ್ಲಿ ಒಂದು ಅಥವಾ ಹೆಚ್ಚಿನದನ್ನು ಸಾಧಿಸಲು ಸರಕಾರಿ ಒಡೆತನದ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲಾಗುತ್ತದೆ. ಅವುಗಳೆಂದರೆ : 1) ದೇಶಕ್ಕಾಗಿ ಆದಾಯ ಸಂಗ್ರಹಿಸುವುದು 2) ಖಾಸಗೀಕರಣ ಮಾಡುವ ಉದ್ದಿಮೆ ಅಥವಾ ಕಂಪೆನಿಗಾಗಿ ಹೂಡಿಕೆ ಬಂಡವಾಳ ಸಂಗ್ರಹಿಸುವುದು. 3) ಅರ್ಥವ್ಯವಸ್ಥೆಯಲ್ಲಿ ಸರಕಾರದ ಪಾತ್ರವನ್ನು ಕಿರಿದುಗೊಳಿಸುವುದು 4) ದೊಡ್ಡ ಶೇರು ಮೂಲತತ್ವವನ್ನು ಪ್ರೋತ್ಸಾಹಿಸುವುದು 5) ದಕ್ಷತೆ ಹೆಚ್ಚಿಸುವುದು 6) ಸ್ಪರ್ಧೆ ಹೆಚ್ಚಿಸುವುದು ಮತ್ತು 7) ಮಾರುಕಟ್ಟೆ ಶಿಸ್ತಿಗೆ ಉದ್ದಿಮೆಗಳನ್ನು ತೆರೆದಿಡುವುದು. ಹೆಚ್ಚಿನ ದೇಶಗಳಿಗೆ ಅನುಕೂಲಕರ ರೀತಿಯಲ್ಲಿ ಹೂಡಿಕೆ ಬಂಡವಾಳ ಸಂಗ್ರಹಿಸಲು ಖಾಸಗೀಕರಣ ಮಾತ್ರ ದಕ್ಷ ವಿಧಾನವಾಗಿದೆ. ಹಿಂದೆ ಅನೇಕ ದೇಶಗಳು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಿಗೆ ಸಾಲ ಪಡೆದು ಬೃಹತ್ ಮಟ್ಟದ ಸಾಲವನ್ನು ಹೊಂದಿವೆ. ಇದರ ಪರಿಣಾಮವಾಗಿ ಈ ದೇಶಗಳಿಗೆ ಸಾಲ ಕಡಿಮೆ ಮಾಡಲು, ಆದಾಯ ಕುದುರಿಸಲು ಮತ್ತು ಹೂಡಿಕೆ ಬಂಡವಾಳ ಸಂಗ್ರಹಿಸಲು ಸರಕಾರಿ ಉದ್ದಿಮೆಗಳನ್ನು ಮಾರುವುದು ಬಿಟ್ಟು ಬೇರೆ ದಾರಿಯಿರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಖಾಸಗೀಕರಣವನ್ನು ಅಳವಡಿಸಿಕೊಳ್ಳುವ ಅಭಿವೃದ್ಧಿಶೀಲ ರಾಷ್ಟ್ರಗಳ ಸಂಖ್ಯೆ ನಿರಂತರವಾಗಿ ಬೆಳೆಯುತ್ತಿದೆ; ಖಾಸಗೀಕರಣದಿಂದ ಹೆಚ್ಚಿನ ಆದಾಯ ಗಳಿಸಿದ ದೇಶಗಳಲ್ಲಿ ಲ್ಯಾಟಿನ್ ಅಮೆರಿಕಾ (51%)ಕ್ಕೆ ಪ್ರಥಮ

ಸ್ಥಾನ. ನಂತರದ ಸ್ಥಾನಗಳನ್ನು ಪೂರ್ವಾ ಏಷ್ಯಾ (21%) ಮತ್ತು ಯುರೋಪ್ ಹಾಗೂ ಕೇಂದ್ರೀಯ ಏಷ್ಯಾ (18%) ಪಡೆದಿವೆ. ಮಧ್ಯಪೂರ್ವ, ಉತ್ತರ ಆಫ್ರಿಕಾ ಅಥವಾ ಉಪಸಹರಾ ಅಫ್ರೀಕಾದಲ್ಲಿ ಕಡಿಮೆ ಖಾಸಗೀಕರಣ ನಡೆದಿದೆ. ಈ ಅವಧಿಯಲ್ಲಿ ದಕ್ಷಿಣ ಏಷ್ಯಾದಲ್ಲಿ ತಕ್ಕ ಮಟ್ಟಿನ ಖಾಸಗೀಕರಣ ನಡೆಯಿತು. ಮುಖ್ಯವಾಗಿ ಪಾಕಿಸ್ತಾನ ಮತ್ತು ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಾರಾಟ ಹೆಚ್ಚುತ್ತಿದೆ. ಪ್ರಸ್ತುತ ಹೆಚ್ಚು ಖಾಸಗೀಕರಣ ನಡೆಯುತ್ತಿರುವ ಹೆಚ್ಚು ಚಲನಶೀಲ ಕ್ಷೇತ್ರಗಳೆಂದರೆ ಇಂಧನ ಮತ್ತು ದೂರಸಂಪರ್ಕ ವಿದ್ಯುತ್ ಕಂಪೆನಿಗಳು ತಮ್ಮ ವಿಸ್ತಾರವಾದ ಕೇಬಲ್ ಮತ್ತು ವಿದ್ಯುತ್ ವಿತರಣೆ ಜಾಲಗಳ ಬಲದಿಂದ ಮತ್ತು ಅಂತರ್ ದೂರಸಂಪರ್ಕ ಜಾಲಗಳನ್ನು ನಡೆಸುವ ಅನುಭವದಿಂದ ದೂರಸಂಪರ್ಕ ಮಾರುಕಟ್ಟೆಗಳನ್ನು ಪ್ರವೇಶಿಸುತ್ತಿವೆ.

ಬಂಡವಾಳದ ಜಾಗತೀಕರಣ ಅಥವಾ ಕಾರ್ಪೊರೇಟ್ ಬಂಡವಾಳವಾದದ ಜೊತೆ ನೇರ ಸಹ ಸಂಬಂಧ ಕಲ್ಪಿಸಿ ಖಾಸಗೀಕರಣವನ್ನು ಅರ್ಥಮಾಡಿಕೊಳ್ಳಬೇಕು. ಖಾಸಗೀಕರಣವನ್ನು ವಿನ್ಯಾಸದಿಂದ ಗ್ರಹಿಸಲಾಗುತ್ತದೆ, ಅವಕಾಶ ಮತ್ತು ಅಪಾಯಕಾರಿ ಘಟನೆಗಳಿಂದಲ್ಲ ಎಂದು ವಾದಿಸಲಾಗುತ್ತದೆ. ವಿಶ್ವದಾದ್ಯಂತ ಬಂಡವಾಳ ಜಾಗತೀಕರಣ ಉದ್ದೇಶಗಳನ್ನು ಜಾರಿಗೆ ತರಲು ಖಾಸಗೀಕರಣವನ್ನು ಉದ್ದೇಶಪೂರ್ವಕವಾಗಿ, ಯೋಜನಬದ್ಧವಾಗಿ ಮತ್ತು ಕಠಿಣವಾಗಿ ಅನುಷ್ಠಾನಗೊಳಿಸಲಾಗುತ್ತದೆ. ವಿಶ್ವದಾದ್ಯಂತ ಸಾರ್ವಜನಿಕ ಉದ್ಯಮ ನಿರ್ವಹಣೆ ಮತ್ತು ಸರಕಾರಿ ಒಡೆತನದ ಉದ್ಯಮಗಳು ಯಶಸ್ವಿಯಾಗಿ ನಡೆಯುತ್ತಿದ್ದರೂ ಖಾಸಗೀಕರಣ ನಡೆಯುತ್ತಿದೆ.

ಖಾಸಗೀಕರಣ ಮತ್ತು ವಿಶೇಷ ಆರ್ಥಿಕ ವಲಯಗಳು ಜಾಗತೀಕರಣಕ್ಕೆ ಹೆಚ್ಚಿನ ಕೊಡುಗೆ ಸಲ್ಲಿಸಿವೆ. ಸರಕಾರಿ ಒಡೆತನದ ಉದ್ಯಮಗಳ ಖಾಸಗೀಕರಣದಿಂದಾಗಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಬೃಹತ್ ಹೂಡಿಕೆ ಅವಕಾಶಗಳು ತೆರೆದುಕೊಂಡಿವೆ. 1980ರ ದಶಕದ ಆರಂಭದಿಂದಲೂ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬೃಹತ್ ಮಟ್ಟದ ಖಾಸಗೀಕರಣ ನಡೆಯುತ್ತಿದ್ದರೂ ಖಾಸಗೀಕರಣ ಆಗಬೇಕಾದ ಸರಕಾರಿ ಆಸ್ತಿ ಇನ್ನು ಉಳಿದಿದೆ ವಿಶೇಷವಾಗಿ ಇಂಧನ ಮತ್ತು ದೂರಸಂಪರ್ಕ ಉದ್ಯಮಗಳಿಗೆ ಸಂಬಂಧಿಸಿದಂತೆ ಇದು ಸತ್ಯ, ಹನ್ನೆರಡು ಖಾಸಗೀಕರಣ ಆದಾಯದ ಅತೀದೊಡ್ಡ ಮೂಲಗಳಾಗಿವೆ. 1995ರಲ್ಲಿ 69 ಬಿಲಿಯನ್ ಡಾಲರ್ ಇದ್ದ ಖಾಸಗೀಕರಣ ಆದಾಯ 1996ರಲ್ಲಿ 88ಬಿಲಿಯನ್ ಡಾಲರ್‌ಗಳಷ್ಟು ಜಾಸ್ತಿಯಾಯಿತು. ಕೈಗಾರಿಕಾ ರಾಷ್ಟ್ರಗಳಲ್ಲಿ ಇನ್ನು ಜಾಗತಿಕ ಖಾಸಗೀಕರಣ ಆದಾಯ ಜಾಸ್ತಿ ಇದ್ದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಖಾಸಗೀಕರಣ ಆದಾಯಗಳಲ್ಲಿ ವಿದೇಶಿ ನೇರ ಹೂಡಿಕೆಯ ಪಾಲು ತುಂಬಾ ಹೆಚ್ಚಿದೆ. ಹೆಚ್ಚಿನ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಖಾಸಗೀಕರಣಗೊಂಡ ಹೆಚ್ಚಿನ ಉದ್ಯಮಗಳು ವಿದೇಶಿಯರಿಂದ ಖರೀದಿಸಲ್ಪಟ್ಟಿವೆ.

## 3.4. ಜಾಗತೀಕರಣ

ಜಾಗತೀಕರಣದಂತೆ ಸಾರ್ವಜನಿಕ ಅಭಿಪ್ರಾಯ ಮತ್ತು ಶೈಕ್ಷಣಿಕ ಪ್ರತಿಕ್ರಿಯೆ ಎಬ್ಬಿಸಿ ಕೆಲವೇ ಕೆಲವು ಸಮಕಾಲೀನ ಸಿದ್ಧಾಂತಗಳಿವೆ. ಏಷ್ಯಾ ರಾಷ್ಟ್ರಗಳು ಹಾಗೂ ಆಫ್ರಿಕಾದಲ್ಲಿ ಬದಲಾವಣೆ ಪ್ರಕ್ರಿಯೆಗೆ ಕಾರಣವಾದ ಮೂಲಭೂತ ವಿಚಾರ ಜಾಗತೀಕರಣ. ಈ ರಾಷ್ಟ್ರಗಳಲ್ಲಿ ಹೆಚ್ಚಿನವು ಕಲ್ಯಾಣ ಕಾರ್ಯಕ್ರಮಗಳ ವಿನಾಶದ ಸವಾಲನ್ನು ಎದುರಿಸುತ್ತಿದ್ದು, ಅವು ಹಳೆಯದರೊಂದಿಗೆ ಹೊಸದನ್ನು ಬೆರೆಸುವ ಪ್ರಕ್ರಿಯೆಯಲ್ಲಿವೆ. ಜಾಗತೀಕರಣ ರಾಷ್ಟ್ರೀಯ ಅರ್ಥವ್ಯವಸ್ಥೆಗಳನ್ನು ನಿಯಂತ್ರಿಸುತ್ತ, ಅವುಗಳ ಅಂತರಾಷ್ಟ್ರೀಯ ಸಂಬಂಧಗಳನ್ನು ಗಟ್ಟಿಗೊಳಿಸುತ್ತಾ ಮತ್ತು ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜೀವನವನ್ನು ಪರಿವರ್ತಿಸುತ್ತಾ ಬದಲಾವಣೆಯ ಒಂದು ಶಕ್ತಿಯುತ ಮೂಲವಾಗಿ ಪರಿಣಮಿಸಿದೆ. ಜಾಗತೀಕರಣ ಕೇವಲ ರಾಷ್ಟ್ರೀಯ ಗಡಿಗಳನ್ನು ದಾಟುವ ಅಥವಾ ರಾಷ್ಟ್ರಗಳ ನಡುವೆ ಸಂಪರ್ಕ ಕಲ್ಪಿಸುವ ಪ್ರಕ್ರಿಯೆಗಳನ್ನು ಮಾತ್ರ ಒಳಗೊಳ್ಳದೆ, ಅದು ಬಂಡವಾಳ, ಸಂಪರ್ಕ ಮತ್ತು ಉತ್ಪಾದಿತ ಸರಕುಗಳ ವಿಶ್ವದಾದ್ಯಂತ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹರಿಯುವುದನ್ನು ಅವಲಂಬಿಸಿದೆ.

ಆರ್ಥಿಕ ದೃಷ್ಟಿಕೋನದಿಂದ ನೋಡುವುದಾದರೆ ಜಾಗತೀಕರಣ ಪ್ರಮುಖ ಗುಣಲಕ್ಷಣಗಳೆಂದರೆ ಸದಾ ವಿಸ್ತಾರವಾಗುತ್ತಿರುವ ಮಾರುಕಟ್ಟೆಗಳಿಗೆ ಕೊಂಡಿಯಾದ ಪರಿವರ್ತನೆ, ಸಾರಿಗೆಯಲ್ಲಾದ ವೇಗದ ತಾಂತ್ರಿಕ ಬದಲಾವಣೆಯಿಂದ ಗಟ್ಟಿ ಮತ್ತು ರಾಷ್ಟ್ರೀಯ

ಗಡಿಗಳನ್ನು ಬದಲಾಯಿಸಿದ ಸಂಪರ್ಕಗಳು, ಅನೇಕ ಮಾಧ್ಯಮ ಸಂಸ್ಥೆಗಳು ಸೇರಿದಂತೆ ಜಾಗತಿಕ ಕಂಪನಿಗಳು ಮತ್ತು ಜಾಗತಿಕ ಹೊಂದಾಣಿಕೆಗಳ ಬೆಳವಣಿಗೆ ಜಾಗತಿಕ ರಾಜಕೀಯದಲ್ಲಿ ಪ್ರಬಲ ಪರಿಣಾಮ ಬೀರಿವೆ. ಆದ್ದರಿಂದ ಜಾಗತೀಕರಣ ಆರ್ಥಿಕ ಗಡಿಗಳನ್ನು ತೆಗೆದು ಹಾಕಲು, ಅಂತಾರಾಷ್ಟ್ರೀಯ ವಿನಿಮಯ ಮತ್ತು ಬಹುರಾಷ್ಟ್ರೀಯ ಸಂವಹನ ಹೆಚ್ಚಿಸಲು ಕಾರಣವಾಗಿದೆ. ಜಾಗತೀಕರಣದ ಸಂದರ್ಭದಲ್ಲಿ ವ್ಯವಹಾರಗಳು ಸ್ವದೇಶದಲ್ಲಿ ತಮ್ಮ ಹತ್ತಿರದ ವಿರೋಧಿಗಳಿಂದ ಸ್ಪರ್ಧೆಯನ್ನು ಎದುರಿಸುವುದಲ್ಲದೆ, ಅವರು ಅಂತಾರಾಷ್ಟ್ರೀಯವಾಗಿಯೂ ಸ್ಪರ್ಧಿಸಬೇಕಾಗಿದೆ.

ಜಾಗತೀಕರಣ ಸಮಾಜದ ಆಧುನೀಕರಣ ಪ್ರಕ್ರಿಯೆ ಜೊತೆ ಕೂಡ ಸಂಬಂಧ ಹೊಂದಿದೆ. ಜಾಗತಿಕ ಸಂಸ್ಕೃತಿ ಬಗ್ಗೆ ಮಾತನಾಡುವ ಹನ್ನೆರ್ಜ್ ಅವರು ವಿಶ್ವದಾದ್ಯಂತ ಅರ್ಥ ಮತ್ತು ಅಭಿವ್ಯಕ್ತಿಯ ರಚನೆ ಅಂತರ್ ಸಂಬಂಧ ಹೊಂದುತ್ತಿವೆ ಎನ್ನುತ್ತಾರೆ. ಅಂತಾರಾಷ್ಟ್ರೀಯ ಏಜೆನ್ಸಿಗಳು ಮತ್ತು ಸಂಸ್ಥೆಗಳು, ಜಾಗತಿಕ ಸಂವಹನ, ಜಾಗತಿಕ ಸ್ಪರ್ಧೆ ಮತ್ತು ಸಾಮಾನ್ಯವಾಗಿ ವ್ಯಾಖ್ಯಾನಿಸುವ ಪರಿಕಲ್ಪನೆಗಳಾದ ಹಕ್ಕುಗಳು, ನಾಗರಿಕತ್ವ ಮತ್ತು ಪ್ರಜಾಪ್ರಭುತ್ವದ ಬೆಳವಣಿಗೆಯಲ್ಲಿ ವಿವಿಧ ಸಮಾಜಗಳ ಸಮರೂಪಕತೆಯನ್ನು ಕಾಣಬಹುದು. ಈ ದೃಷ್ಟಿಕೋನದಲ್ಲಿ ಆಧುನಿಕತೆ ಅಂದರೆ ಸ್ಥಳ, ಹಕ್ಕುಗಳು ಮತ್ತು ಸಮಾಜದಲ್ಲಿ ವಿವಿಧ ಜನರ ಪಾತ್ರಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಪರಿವರ್ತನೆ ಮತ್ತು ಒಂದು ಜಾಗತಿಕ ಚಳುವಳಿ ಕೂಡಾ.

ಅನೇಕ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿರುವಂತೆ ವಿದೇಶಿ ಸಾಲದ ಹೊರೆ ಮತ್ತು ಪಾವತಿ ಉಳಿಕೆ ಬಿಕ್ಕಟ್ಟಿನಿಂದ ಭಾರತ 'ರಚನಾತ್ಮಕ ಹೊಂದಾಣಿಕೆ ಧೋರಣೆ'ಯನ್ನು ಅಂಗೀಕರಿಸುವುದು ಅನಿವಾರ್ಯವಾಯಿತು. ವಾಷಿಂಗ್ಟನ್ ಒಡಂಬಡಿಕೆಯನ್ವಯ ರಚಿಸಲ್ಪಟ್ಟ ಈ ಧೋರಣೆ ಜಾಗತೀಕರಣದ ಮುಖ್ಯ ಸಾಧನಗಳಲ್ಲಿ ಒಂದಾಗಿದೆ. ಭಾರತದಲ್ಲಿ ಮಧ್ಯಮ ಆದಾಯದ ಸರಾಸರಿ 60.5 ಮಿಲಿಯನ್ ಮನೆಗಳಿದ್ದು, ಒಟ್ಟು 300 ಮಿಲಿನಯ್‌ಗೂ ಹೆಚ್ಚು ವ್ಯಕ್ತಿಗಳಿದ್ದಾರೆ. ಎಂದು ಅನ್ವಯಿತ ಆರ್ಥಿಕ ಸಂಶೋಧನಾ ರಾಷ್ಟ್ರೀಯ ಮಂಡಳಿ 2001-02ರಲ್ಲಿ ಅಂದಾಜು ಮಾಡಿದೆ. ಆ ಮಾಧ್ಯಮ ವರ್ಗ ಜಾಗತಿಕ ಮಾಧ್ಯಮಗಳು ಮತ್ತು ವ್ಯವಹಾರ ಸಂಸ್ಥೆಗಳ ಉದ್ದೇಶಿತ ಸಮರ್ಥ ಗುಂಪುಗಳಾಗಿವೆ.

ಈ ಮಾಧ್ಯಮವರ್ಗ ಅಮೇರಿಕಾದ ಸಮಗ್ರ ದೇಶೀಯ ಮಾರುಕಟ್ಟೆಯಿಂದ ದೊಡ್ಡದಾಗಿದೆ ಮತ್ತು ಎರಡು ಅಥವಾ ಮೂರು ಯುರೋಪಿಯನ್ ರಾಷ್ಟ್ರಗಳ ಒಟ್ಟು ಜನಸಂಖ್ಯೆಯಷ್ಟಾಗಬಹುದು. ಇದು ಭಾರತದ ಬೆಳೆಯುತ್ತಿರುವ ಮಾಧ್ಯಮ ಪ್ರೇಕ್ಷಕಗಣವಾಗಿದ್ದು, ಮಾಧ್ಯಮ ಜಾಹೀರಾತು ಮತ್ತು ಗ್ರಾಹಕ ಮಾರುಕಟ್ಟೆಗಳು ಇದರತ್ತ ಗುರಿ ಇಟ್ಟಿವೆ. ಅವರ ಆಕಾಂಕ್ಷೆಗಳನ್ನು ಜಾಗತಿಕ ಮಾಧ್ಯಮಗಳು ಉತ್ತಮ ಜೀವನಶೈಲಿಗಳನ್ನು ಮುಖ್ಯವಾಗಿ ಉಪಗ್ರಹ ಟೆಲಿವಿಷನ್ ವಾಹಿನಿಗಳು, ಮನರಂಜನೆ, ಜೀವನಶೈಲಿ, ಫ್ಯಾಷನ್, ಕಾರುಗಳು ಮತ್ತು ಹೊಸ ಎಲೆಕ್ಟ್ರಾನಿಕ್ ಗ್ರಾಹಕ ವಸ್ತುಗಳಿಗೆ ಒತ್ತು ನೀಡಿ, ದೇಶದ ಬಡವರು, ಮಹಿಳೆಯರು ಮತ್ತು ದುರ್ಬಲ ವರ್ಗಗಳನ್ನು ಕಾಡುವ ಅಭಿವೃದ್ಧಿ ಸಮಸ್ಯೆಗಳನ್ನು ಪೂರ್ಣ ನಿರ್ಲಕ್ಷಿಸುತ್ತಿವೆ. ಆದ್ದರಿಂದ ಜಾಗತೀಕರಣ ಬೃಹತ್ ಸುಚರ್ ಮತ್ತು ಹೈಪರ್ ಮಾರುಕಟ್ಟೆಗಳೊಂದಿಗೆ ವಿಶ್ವವನ್ನು ಒಂದು ವಿಶ್ವಮಾರುಕಟ್ಟೆಯಾಗಿ ಪರಿವರ್ತಿಸುತ್ತದೆ. ಇಲ್ಲಿ ಜಾಗತಿಕ ಮಾಧ್ಯಮ ಕೇವಲ ಉತ್ಪನ್ನಗಳನ್ನು ಮಾರಾಟ ಮಾಡುವಲ್ಲಿ ಪ್ರಮುಖ ಪಾತ್ರವಹಿಸುವುದಲ್ಲದೆ, ಮನೋಭಾವಗಳು, ವರ್ತನೆ ಮತ್ತು ಜೀವನ ಶೈಲಿಗಳನ್ನು ಮಾರಾಟ ಮಾಡುತ್ತವೆ.

ಜಾಗತಿಕ ಆರ್ಥಿಕ ಬೇಡಿಕೆಗಳಿಗೆ ಸ್ಪಂದಿಸಲು ದೊಡ್ಡ ಪ್ರಮಾಣದ ಉತ್ಪಾದನೆಯ ಆರಂಭದಿಂದ ಭಾರತ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳು ಕಷ್ಟಕರ, ಏಕಪ್ರಕಾರದ, ಕೌಶಲ್ಯರಹಿತ ಅಥವಾ ಅರೆ ಕೌಶಲ್ಯದ ಕೆಲಸದಲ್ಲಿ ಹೆಚ್ಚು ಭಾಗಿಯಾಗುವಂತೆ ಮಾಡಿತು. ಆಗ ಸಂಶೋಧನೆ ಮತ್ತು ನಿರ್ವಹಣೆಯನ್ನು ಬಹುರಾಷ್ಟ್ರೀಯ ಕಂಪನಿಗಳು ಮತ್ತು ರಾಷ್ಟ್ರದಾಚೆಯ ಕಂಪನಿಗಳ ಪ್ರವೇಶದಿಂದ ಭಾರತದಲ್ಲಿರುವ ಜನರು ಎಲೆಕ್ಟ್ರಾನಿಕ್ಸ್, ಬಟ್ಟೆ ರಫ್ತು ಘಟಕಗಳು, ಔಷಧೀಯ ಉದ್ಯಮಗಳು, ಬಾಹ್ಯ ವ್ಯವಹಾರ ಸೇವಾ ಉದ್ಯಮ, ಮಾಹಿತಿ ತಂತ್ರಜ್ಞಾನ ಮತ್ತು ಸಂಬಂಧಿಸಿದ ಉದ್ಯಮಗಳಲ್ಲಿ ಉದ್ಯೋಗ ಕಂಡುಕೊಳ್ಳುತ್ತಿದ್ದಾರೆ. ಮಹಿಳೆಯರು ಸೇರಿದಂತೆ ಯುವ ಪೀಳಿಗೆಯ

ಅನೇಕ ಮಂದಿ ಮುಖ್ಯ ದಕ್ಷಿಣಾ ಭಾರತದವರು ಮಾಹಿತಿ ತಂತ್ರಜ್ಞಾನ ಮತ್ತು ನರ್ಸಿಂಗ್‌ಗಳಲ್ಲಿ ವೃತ್ತೀಯ ಕೌಶಲ್ಯಗಳನ್ನು ಗಳಿಸಿ ಉದ್ಯೋಗಕ್ಕಾಗಿ ಶ್ರೀಮಂತ ದೇಶಗಳಿಗೆ ವಲಸೆ ಹೋಗಲು ಸಮರ್ಥರಾಗಿದ್ದಾರೆ. ಸಾಮಾನ್ಯವಾಗಿ ರಚನಾತ್ಮಕ ಹೊಂದಾಣಿಕೆ ಧೋರಣೆ ಭಾರತದ ನಗರ ಪ್ರದೇಶದಲ್ಲಿರುವ ಶಿಕ್ಷಿತ ಜನರ ಒಂದು ಆಯ್ದ ಮತ್ತು ಚಿಕ್ಕ ವರ್ಗಕ್ಕೆ ಅನುಕೂಲಕರವಾಗಿದೆ. ಈ ಧೋರಣೆ ರಾಷ್ಟ್ರವನ್ನು ಕೆಳಗೆ ತರುವುದನ್ನು ಗೊತ್ತುಪಡಿಸಿದರೆ ಹಾಗೂ ಶಿಕ್ಷಣ ಮತ್ತು ಆರೋಗ್ಯ ಸೇವೆಗಳಲ್ಲಿ ಸಾರ್ವಜನಿಕ ಹೂಡಿಕೆಯ ಕಡಿತ, ಆಹಾರ ಮತ್ತು ರಸಗೊಬ್ಬರ ಸಬ್ಸಿಡಿಗಳಲ್ಲಿ ಕಡಿತ, ಬಂಡವಾಳ ಆಧಾರಿತ ಮತ್ತು ಶ್ರಮ ಇಳಿಕೆ ಉತ್ಪಾದನಾ ಕಾರ್ಯತಂತ್ರಗಳು ಮತ್ತು ಅಭಿವೃದ್ಧಿ ಚಟುವಟಿಕೆಗಳಿಗಾಗಿ ಇರುವ ಬಜೆಟ್ ಹಂಚಿಕೆಗಳಲ್ಲಿ ಸಾಮಾನ್ಯ ಕಡತಗಳನ್ನು ಸೇರಿಸಿದೆ.

## 3.5 ಸಾರಾಂಶ

ವಿಶ್ವದಾದ್ಯಂತ ಸಮಾಜಗಳು ಮತ್ತು ಅರ್ಥ ವ್ಯವಸ್ಥೆಗಳನ್ನು ಪರಿತವರ್ತಿಸುವ ಮೂರು ಪ್ರಬಲ ಶಕ್ತಿಗಳೆಂದರೆ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ. ಯಾಕೆಂದರೆ ಈ ಪ್ರಕ್ರಿಯೆಗಳು ಅಂತರ್ ಸಂಬಂಧ ಹೊಂದಿದ್ದು, ಇವುಗಳನ್ನು ಒಟ್ಟಾಗಿಯೇ ನೋಡಬೇಕು. ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳು ಬಹು ಆಯಾಮದ ಸಿದ್ಧಾಂತಗಳಾಗಿದ್ದು, ಅವು ಸರಕಾರದ ಆರ್ಥಿಕ ವಿಷಯಗಳ ಮೇಲೆ ಮಾತ್ರವಲ್ಲದೆ ಸಮಾಜಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ವಿಷಯಗಳ ಮೇಲೂ ಪ್ರಭಾವ ಬೀರುತ್ತವೆ.

ಖಾಸಗೀಕರಣ 20ನೇ ಶತಮಾನದ ಆರಂಭದಲ್ಲಿ ಕಾಣಿಸಿಕೊಂಡ ರಾಷ್ಟ್ರೀಯವಾದ ಪ್ರಕ್ರಿಯೆಯ ವ್ಯತಿರಿಕ್ತತೆಯನ್ನು ಪ್ರತಿನಿಧಿಸುತ್ತದೆ. 1990ರ ದಶಕದಲ್ಲಿ ಭಾರತದಲ್ಲಿ ರಾಜಕೀಯ ಪರಿವರ್ತನೆಯ ಒಂದು ಸಂಕೀರ್ಣ ಪ್ರಕ್ರಿಯೆ ಮತ್ತು ಅರ್ಥವ್ಯವಸ್ಥೆಯ ಉದಾರೀಕರಣ ಕಾಣಿಸಿಕೊಂಡಿತು. ಇದೇ ದಶಕದಲ್ಲಿ ನಿಯಂತ್ರಿತ ಅರ್ಥ ವ್ಯವಸ್ಥೆಯಾಗಿದ್ದ ಭಾರತ ತುಂಬಾ ಮುಕ್ತ ವ್ಯವಸ್ಥೆಯಾಗಿ ಪರಿವರ್ತನೆಗೊಂಡಿತು.

1991ರ ಆಗಸ್ಟ್‌ನಲ್ಲಿ ಭಾರತೀಯ ಅರ್ಥ ವ್ಯವಸ್ಥೆಯಲ್ಲಿ ಉದಾರೀಕರಣ ಪ್ರಕ್ರಿಯೆ ಆರಂಭಗೊಂಡ ನಂತರ ಅದನ್ನು ಅಂತಾರಾಷ್ಟ್ರೀಯವಾಗಿ ಸ್ಪರ್ಧಾತ್ಮಕವನ್ನಾಗಿ ಮಾಡಲು ವ್ಯಾಪಾರ, ಉದ್ದಿಮೆ, ತೆರಿಗೆ ಕ್ರಮ, ವಿನಿಮಯ ದರ, ಬಂಡವಾಳ ಮಾರುಕಟ್ಟೆ ಮತ್ತು ವಿದೇಶಿ ಆರ್ಥಿಕ ಧೋರಣೆಗಳಲ್ಲಿ ರಚನಾತ್ಮಕ ಸುಧಾರಣೆಗಳಾದವು. 1991ರ ಆಗಸ್ಟ್‌ನಲ್ಲಿ ಜಾರಿಗೆ ಬಂದ ಹೊಸ ಕೈಗಾರಿಕಾ ನೀತಿ ಕೈಗಾರಿಕಾ ಪರವಾನಿಗೆಯನ್ನು ರದ್ದು ಪಡಿಸಿತು, ಸರಕಾರಕ್ಕೆ ಮೀಸಲಾಗಿದ್ದ ಅನೇಕ ಕ್ಷೇತ್ರಗಳನ್ನು ಮುಕ್ತಗೊಳಿಸಿತು ಮತ್ತು ಸೀಮಿತ ಸ್ವರೂಪದಲ್ಲಿ 'ಹೂಡಿಕೆ ಹಿಂಪಡೆತ' ಪರಿಕಲ್ಪನೆಯನ್ನು ಮೊದಲ ಬಾರಿಗೆ ಜಾರಿಗೆ ತಂದಿತು.

ಖಾಸಗೀಕರಣ ಮತ್ತು ವಿಶೇಷ ಆರ್ಥಿಕ ವಲಯಗಳು ಜಾಗತೀಕರಣಕ್ಕೆ ಹೆಚ್ಚಿನ ಕೊಡುಗೆ ನೀಡಿವೆ. ಜಾಗತೀಕರಣ ಕೇವಲ ರಾಷ್ಟ್ರದಾಚೆಯ ಗಡಿಗಳು ಅಥವಾ ರಾಷ್ಟ್ರಗಳ ನಡುವೆ ಸಂಬಂಧ ಏರ್ಪಡಿಸುವ ಪ್ರಕ್ರಿಯೆಗಳನ್ನು ಒಳಗೊಳ್ಳದೆ ಅದು ವಿಶ್ವದಾದ್ಯಂತ ಪ್ರದೇಶದಿಂದ ಪ್ರದೇಶಕ್ಕೆ ಬಂಡವಾಳ, ಸಂಪರ್ಕ ಮತ್ತು ಉತ್ಪಾದಿತ ಸರಕುಗಳ ಹರಿಯುವಿಕೆಯನ್ನು ಅವಲಂಬಿಸಿದೆ. ಆದ್ದರಿಂದ ಜಾಗತೀಕರಣ ಆರ್ಥಿಕ ಗಡಿಗಳನ್ನು ತೆಗೆದುಹಾಕುವ, ಅಂತಾರಾಷ್ಟ್ರೀಯ ವಿನಿಮಯ ಮತ್ತು ರಾಷ್ಟ್ರದಾಚೆಯ ಸಂವಹನದ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಜಾಗತೀಕರಣವು ವಿಶ್ವವನ್ನು ಬೃಹತ್ ಸುಪರ್ ಮತ್ತು ಹೈಪರ್ ಮಾರುಕಟ್ಟೆಗಳೊಂದಿಗೆ ಒಂದು ಜಾಗತಿಕ ಮಾರುಕಟ್ಟೆಯಾಗಿ ಪರಿವರ್ತಿಸುತ್ತದೆ. ಇಲ್ಲಿ ಜಾಗತಿಕ ಮಾಧ್ಯಮಗಳು ಸರಕುಗಳನ್ನು ಮಾರಾಟ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವುದಲ್ಲದೆ, ಮನೋಭಾವಗಳು, ವರ್ತನೆ ಮತ್ತು ಜೀವನಶೈಲಿಗಳನ್ನು ಮಾರಾಟ ಮಾಡುತ್ತವೆ. ಸಾಮಾನ್ಯವಾಗಿ ರಚನಾತ್ಮಕ ಹೊಂದಾಣಿಕೆ ಧೋರಣೆ ಭಾರತದ ನಗರ ಪ್ರದೇಶದ ಶಿಕ್ಷಿತ ಜನರ ಆಯ್ದ ಮತ್ತು ಚಿಕ್ಕ ವರ್ಗಕ್ಕೆ ಅನುಕೂಲಕರವಾಗಿದೆ. ಈ ಧೋರಣೆ ರಾಷ್ಟ್ರವನ್ನು ಕೆಳಗೆ ತರುವುದನ್ನು ಗೊತ್ತು ಪಡಿಸಿದೆ. ಹಾಗೂ ಶಿಕ್ಷಣ ಮತ್ತು ಆರೋಗ್ಯ ಸೇವೆಗಳಲ್ಲಿ ಕಡಿತ, ಆಹಾರ ಮತ್ತು ರಸಗೊಬ್ಬರ ಸಬ್ಸಿಡಿಗಳಲ್ಲಿ

ಕಡಿತ, ಬಂಡವಾಳ ಆಧಾರಿತ ಮತ್ತು ಶ್ರಮ ಉಳಿಕೆ ಉತ್ಪಾದನಾ ಕಾರ್ಯತಂತ್ರಗಳು ಮತ್ತು ಅಭಿವೃದ್ಧಿ ಚಟುವಟಿಕೆಗಳಿಗಿರುವ ಬಜೆಟ್ ಹಂಚಿಕೆಗಳಲ್ಲಿ ಸಾಮಾನ್ಯ ಕಡಿತಗಳನ್ನು ಸೇರಿಸಿದೆ.

## 3.6. ನಿಮ್ಮ ಪ್ರಗತಿ ಪರಿಶೀಲನೆ :

**ಸೂಚನೆ :** ನಿಮ್ಮ ಉತ್ತರಗಳನ್ನು ಘಟಕದಲ್ಲಿರುವ ಅಂಶಗಳೊಂದಿಗೆ ತುಲನೆ ಮಾಡಿ.

1. ಭಾರತೀಯ ಅರ್ಥ ವ್ಯವಸ್ಥೆಯ ಉದಾರೀಕರಣ ಪ್ರಕ್ರಿಯೆಯನ್ನು ವಿವರಿಸಿ.
2. ಸರಕಾರಿ ಒಡೆತನದ ಉದ್ಯಮಗಳ ಖಾಸಗೀಕರಣದ ಕೆಲವು ಉದ್ದೇಶಗಳಾವುವು ?
3. ಜಾಗತೀಕರಣದ ಪ್ರಮುಖ ಗುಣಲಕ್ಷಣಗಳಾವುವು ?
4. ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಮೇಲೆ ಜಾಗತೀಕರಣ ಕೆಲವು ಋಣಾತ್ಮಕ ಪರಿಣಾಮಗಳನ್ನು ಚರ್ಚಿಸಿ.

## 3.7. ಹೆಚ್ಚಿನ ಓದಿಗಾಗಿ :


1. ರಾಬರ್ಟ್ ಓ. ಸ್ಲಾಟರ್ ಮತ್ತು ಇತರರು (ಸಂ.)- ಗ್ಲೋಬಿಲ್ ಟ್ರಾನ್ಸ್ ಫಾರ್ಮೇಶಾನ್ ಅಂಡ್ ದ ಥರ್ಡ್ ವರ್ಲ್ಡ್.
2. ಎಂ. ಫೆದರ್ ಸ್ಟೋನ್ (ಸಂ)-ಗ್ಲೋಬಲ್ ಕಲ್ಚರ್ ಎಡ್ವರ್ಡ್ ಎಸ್ ಹರ್ಮನ್ ಮತ್ತು ರಾಬರ್ಟ್ ಡಬ್ಲ್ಯೂ ಮೆಕೆಸ್ನಿ- ದಿ ಗ್ಲೋಬಲ್ ಮೀಡಿಯಾ: ದಿ ನ್ಯೂ ಮಿಶನರಿಸ್ ಆಫ್ ಕಾರ್ಪೋರೇಟ್ ಕ್ಯಾಪಿಟಲಿಸಂ ಕಿರಣ ಪ್ರಸಾದ್ (ಸಂ.) -ವಿಮೆನ್, ಗ್ಲೋಬಲೈಜೇಶನ್ ಅಂಡ್ ಮಾಸ್ ಮೀಡಿಯಾ : ಇಂಟರ್ ನ್ಯಾಷನಲ್ ಫ್ಯಾಸೆಟ್ಸ್ ಆಫ್ ಇಮಾನ್ಸಿಪೇಶನ್.
3. ರಾಜ್ ಮೋಹಿನಿ ಸೇಥಿ(ಸಂ) ಗ್ಲೋಬಲೈಜೇಶನ್, ಕಲ್ಚರ್ ಅಂಡ್ ವಿಮೆನ್ಸ್ ಡೆವೆಲಪ್‌ಮೆಂಟ್.
4. ಶೀಲಾ ರೌಬೊತಂ ಮತ್ತು ಸ್ಟೆಫಾನಿ ಲಿಂಕೋಗ್ಲೆ (ಸಂ) ವಿಮೆನ್ ರೆಸಿಸ್ಟ್ ಗ್ಲೋಬಲೈಜೇಶನ್ : ಮೊಬಿಲೈಸಿಂಗ್ ಫಾರ್ ಲೈವ್‌ಲಿಹುಡ್ ಅಂಡ್ ರೈಟ್ಸ್.

# ಘಟಕ 4 : ಮಾಧ್ಯಮಗಳಲ್ಲಿ ಭವಿಷ್ಯಾತ್ಮಕ ಮಾರ್ಗಗಳು

ರಚನೆ :


4.0. ಉದ್ದೇಶಗಳು

4.1. ಪ್ರಸ್ತಾವನೆ

4.2. ಮಾಧ್ಯಮ ಸಂಯೋಗ

4.3. ಸೈಬರ್ ಪತ್ರಿಕೋದ್ಯಮ

4.4. ಮಾಧ್ಯಮಗಳಲ್ಲಿ ವಿದೇಶಿ ನೇರ ಹೂಡಿಕೆ

4.5. ಸಾರಾಂಶ

4.6. ನಿಮ್ಮ ಪ್ರಗತಿ ಪರಿಶೀಲನೆ

4.7. ಹೆಚ್ಚಿನ ಓದಿಗಾಗಿ

## 4.0. ಉದ್ದೇಶಗಳು :

ಕ್ರಾಂತಿಕಾರಿ ವ್ಯಾಪ್ತಿ ಮತ್ತು ಪ್ರಮಾಣದಲ್ಲಿ ಉಂಟಾದ ತಾಂತ್ರಿಕ ಶೋಧನೆಗಳಿಂದ 20ನೇ ಶತಮಾನದ ಕೊನೆಯಲ್ಲಿ ಪೂರ್ಣ ಉದ್ವೇಗದಿಂದ ಕೂಡಿತು. ಅದು ಸಂವಹನ ವಿಷಯಗಳಲ್ಲಿ ಡಿಜಿಟಲ್ ಪರಿವರ್ತನೆ, ತಾಂತ್ರಿಕ ಸಂಯೋಗ, ಮಾಧ್ಯಮಗಳಿಂದ ವಿಶ್ವದಾದ್ಯಂತ ಸುದ್ದಿ ಹಾಗೂ ಮಾಧ್ಯಮ ವಿಷಯದ ಜಾಗತೀಕರಣ, ಪ್ರಸ್ತುತ ಘಟಕದಿಂದ ನೀವು :

- ಮಾಧ್ಯಮದಲ್ಲಿರುವ ಭವಿಷ್ಯಾತ್ಮಕ ಮಾರ್ಗಗಳನ್ನು ಅರ್ಥೈಸಬಹುದು.
- ಮಾಧ್ಯಮ ಸಂಯೋಗ ಪರಿಕಲ್ಪನೆಯನ್ನು ಅರ್ಥೈಸಬಹುದು.
- ಸೈಬರ್ ಪತ್ರಿಕೋದ್ಯಮದ ಆಯಾಮವನ್ನು ಅಧ್ಯಯನ ಮಾಡಬಹುದು ಮತ್ತು
- ಮಾಧ್ಯಮಗಳಲ್ಲಿ ವಿದೇಶಿ ನೇರ ಹೂಡಿಕೆಯ ವ್ಯಾಪ್ತಿಯನ್ನು ತಿಳಿಯಬಹುದು.

## 4.1. ಪ್ರಸ್ತಾವನೆ

ಮೂಲತಃ ಪ್ರತ್ಯೇಕವಾಗಿದ್ದ ಮತ್ತು ಭಿನ್ನವಾಗಿದ್ದ ಪ್ರಸಾರಕರು, ಕೇಬಲ್ ಉತ್ಪಾದಕರು, ಪ್ರಕಾಶಕರು ಮತ್ತು ಇಂಟರ್‌ನೆಟ್ ಬಳಕೆದಾರರನ್ನು ಒಟ್ಟು ಸೇರಿಸುವ ಎಲೆಕ್ಟ್ರಾನಿಕ್ಸ್, ದೂರಸಂಪರ್ಕ ಮತ್ತು ಡಾಟ ಪ್ರೊಸೆಸಿಂಗ್‌ಗಳ ಸಂಯೋಗದಲ್ಲಿ ಡಿಜಿಟಲ್ ತಂತ್ರಜ್ಞಾನಗಳು ಪ್ರಮುಖ ಪಾತ್ರವಹಿಸಿವೆ. ಪರ್ಸನಲ್ ಕಂಪ್ಯೂಟರ್, ಟೆಲಿವಿಷನ್ ಸೆಟ್ ಮತ್ತು ದೂರವಾಣಿಗಳು ಸಂಯೋಜನೆಗೊಂಡು ನಿಜವಾದ ಬಹು ಮಾಧ್ಯಮ ವೇದಿಕೆಗಳಾಗಿವೆ. ತಾಂತ್ರಿಕ ಸಂಯೋಗದಿಂದ ಅಂಕಿ ಅಂಶ, ಪಠ್ಯ, ಧ್ವನಿ ಅಥವಾ ದೃಶ್ಯದ ರೂಪದಲ್ಲಿ ಬೃಹತ್ ಪ್ರಮಾಣದ ಮಾಹಿತಿ ಸಾಗಿಸುವ ಸಾಮರ್ಥ್ಯವುಳ್ಳ, ಪೂರ್ಣ ಸೇವಾ ಬಾಹುಗಳು ಅಥವಾ ಸಂಯೋಜಿತ ಡಿಜಿಟಲ್ ಸೇವಾ ಜಾಲಗಳ ಅಭಿವೃದ್ಧಿಗೆ ಕಾರಣವಾಗಿದೆ.

ತಂತ್ರಜ್ಞಾನಗಳಿಂದಾಗಿ ಮಾಧ್ಯಮಗಳನ್ನು ಬಂಡವಾಳವಾಗಿ ಉಪಯೋಗಿಸಲಾಗುತ್ತದೆ. ಅದರಲ್ಲಿ ಕಂಪ್ಯೂಟರ್‌ಗಳು, ಫ್ಯಾಕ್ಸ್, ಫೋನ್, ಬಹುಮಾಧ್ಯಮ ಅಂದರೆ ಧ್ವನಿ, ಅನಿಮೇಶನ್ ಮತ್ತು ಗ್ರಾಫಿಕ್ಸ್, ಪರಸ್ಪರ ಸ್ಪಂದನ ದೃಶ್ಯ, ವೀಡಿಯೋ ಕಾನ್ಫರೆನ್ಸಿಂಗ್ ಮತ್ತು ಟೆಲಿಕಾನ್ಫರೆನ್ಸಿಂಗ್‌ಗಳು ಸೇರಿವೆ. ಪರ್ಸನಲ್ ಡಿಜಿಟಲ್ ಅಸಿಸ್ಟೆಂಟ್‌ಗಳು ಹೆಚ್ಚು ಒಲವು ತೋರಿದ ವೈಯಕ್ತಿಕ ಸಂವಹನಕಾರಗಳಾಗಿವೆ. ಅವು ಪರ್ಸನಲ್ ಕಂಪ್ಯೂಟರ್‌ಗಳಾಗಿದ್ದು ವಯರ್‌ಲೇಸ್ ಇಂಟರ್‌ನೆಟ್ ಲಭ್ಯತೆ, ಧ್ವನಿ ಗ್ರಹಿಕೆ ಮತ್ತು ಹಸ್ತಾಕ್ಷರ ಗ್ರಹಿಕೆ ಸಾಫ್ಟ್‌ವೇರ್, ಎಲ್‌ಸಿಡಿ ಪ್ರದರ್ಶಕ, ಸ್ಪರ್ಶ ಪರದೆ ಮತ್ತು ನಿಸ್ತಂತು ದೂರವಾಣಿ ಮುಂತಾದ ಲಕ್ಷಣಗಳನ್ನು ಒಳಗೊಂಡಿದೆ.

ಪೂರ್ಣ ಸೇವಾ ಜಾಲಗಳಿಂದ ಸರಕಾರ ಮತ್ತು ಇತರ ಸಂಸ್ಥೆಗಳಿಂಪ ಬಹುಮಾಧ್ಯಮ ಮಾಹಿತಿ ಮೂಲಗಳು, ಡಾಟ ಬೇಸ್‌ಗಳು ಒದಗಿಸುವ ಮಾಹಿತಿಯನ್ನು ನೀಡಲು ಹಾಗೂ ಅನೇಕ ವಾಣಿಜ್ಯ ಮತ್ತು ಇತರ ಸೇವೆಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಅನೇಕ ವಾಣಿಜ್ಯ, ಸರಕಾರಿ ಮತ್ತು ಸಾಂಸ್ಥಿಕ ವಿಳಾಸಗಳು ಹಾಗೂ ದೂರವಾಣಿ ಸಂಖ್ಯೆಗಳನ್ನು ಒಳಗೊಂಡ ವಿದ್ಯುನ್ಮಾನ ಡೈರೆಕ್ಟರಿ ಸೇವೆಗಳು ಕೂಡಾ ಆರಂಭವಾಗಿದ್ದು, ಅದು ಶೀಘ್ರ ಮಾಹಿತಿ ತಿದ್ದುಪಡಿಗೆ ಸಹಕರಿಸುತ್ತದೆ.

ಪೂರ್ಣ ಸೇವಾ ಜಾಲಗಳು ಇ-ಮೇಲ್, ಬುಲೆಟಿನ್ ಫಲಕಗಳು, ಚಾಟ್ ಸೇವೆಗಳು ಮತ್ತು ಕಂಪ್ಯೂಟರ್ ವೀಡಿಯೋ ಕಾನ್ಫರೆನ್ಸ್‌ಗಳಂತಹ ಅನೇಕ ಸೇವೆಗಳನ್ನು ಒದಗಿಸುತ್ತವೆ. ವಾಸ್ತವಿಕ ಸುದ್ದಿಕೊಠಡಿಗಳು ಕಾಣಿಸಿಕೊಂಡು, ಇಂಗ್ಲಿಷ್ ಮತ್ತು ಕೆಲವು ಪ್ರಾದೇಶಿಕ ಭಾಷೆಗಳಲ್ಲಿ ಆನ್‌ಲೈನ್ ಪತ್ರಿಕೆಗಳು ಮತ್ತು ಮ್ಯಾಗಜೀನ್‌ಗಳು ಬಿಡುಗಡೆಯಾಗಿ ಸಾಂಪ್ರದಾಯಿಕ ಮುದ್ರಣ ಮಾಧ್ಯಮಗಳು

ಕೂಡಾ ಸಂಯೋಗ ಪ್ರಕ್ರಿಯೆಯನ್ನು ಸೇರಿವೆ. ಪತ್ರಿಕಾಗುಂಪುಗಳಂತಹ ಅನೇಕ ವಿಶೇಷ ಗುಂಪುಗಳು ಅಂತರ್ಜಾಲದಲ್ಲಿ ಗುರುತಿಸಲ್ಪಟ್ಟಿವೆ.

ಹೆಚ್ಚಿನ ಮಾಧ್ಯಮ ಸಂಸ್ಥೆಗಳು ಅವುಗಳದ್ದೇ ಆದ ಅಂತಾರ್ಜಾಲ ತಾಣಗಳನ್ನು ಒಳಗೊಂಡಿದ್ದು, ದಿನವಿಡೀ ಹೊಸ ಹೊಸ ಸುದ್ದಿ ಹಾಗೂ ಮಾಹಿತಿಗಳನ್ನು ಒದಗಿಸುತ್ತವೆ. ದಿನವಿಡೀ ಘಟನೆಗಳ ವರದಿ, ಕ್ಷಣದ ವರದಿ, ಸುದ್ದಿ ವಿಶ್ಲೇಷಣೆ ಹಾಗೂ ಅನೇಕ ಹೊಸ ರೀತಿಯ ಕಾರ್ಯಕ್ರಮಗಳನ್ನು ನೀಡಬೇಕಾದ ಕಾರಣ, ಇದರಲ್ಲಿ ಕಾರ್ಯ ನಿರ್ವಹಿಸುವ ಮಾಧ್ಯಮ ವ್ಯಕ್ತಿಗಳು ಹೊಸ ಸಂವಹನ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ, ಇದು ಅವರಿಗೆ ಸವಾಲಾಗಿ ಪರಿಣಮಿಸಿದೆ. ಅನೇಕ ಮಾಧ್ಯಮ ವೃತ್ತಿಯ ವ್ಯಕ್ತಿಗಳು ಅಂತಾರ್ಜಾಲದಲ್ಲಿರುವ ವಿದ್ಯುನ್ಮಾನ ವೇದಿಕೆಗಳು ಹಾಗೂ ಹೊಸ ಗುಂಪುಗಳ ಭಾಗವಾಗಿದ್ದು, ಅಂತರ್ಜಾಲ ತಾಣಗಳಲ್ಲಿ ಗುಂಪು ಚರ್ಚೆಗಳು, ಸಂವಾದಗಳು ಹಾಗೂ ವಿಶೇಷ ಉಪನ್ಯಾಸಗಳನ್ನು ನಡೆಸುತ್ತಾರೆ.

ಮಾಧ್ಯಮ ಸಂಸ್ಥೆಗಳು ಮಾಹಿತಿ ತಂತ್ರಜ್ಞಾನಗಳನ್ನು ಹೆಚ್ಚು ಹೆಚ್ಚು ಬಳಸುತ್ತಿರುವುದರಿಂದ ಸಂವಹನದಲ್ಲಿ ಪ್ರಮುಖ ಬದಲಾವಣೆಗಳಾಗಲಿವೆ. ಸಂವಹನದ ವೆಚ್ಚ ಕಡಿಮೆಯಾಗಲಿದೆ. ವಿದ್ಯುನ್ಮಾನ ಮಾಧ್ಯಮಗಳು ಕಾಗದರಹಿತ ಕಚೇರಿಗಳಾಗಲಿವೆ. ದೂರ ಎಂಬ ಅಡೆತಡೆ ಇರುವುದಿಲ್ಲ. ಸಂವಹನ ಒಂದೇ ಜಾಲದಿಂದ ನಡೆಯಲಿದೆ. ಒಂದು ಕಂಪ್ಯೂಟರ್ +ಒಂದು ದೂರವಾಣಿ+ಒಂದು ಅಂಚೆಸೇವೆ ಇವುಗಳ ಮೂಲಕ ನಡೆಯಬೇಕಾದ ಸಂವಹನ ಮುಖ್ಯವಾಗಿ ಒಂದೇ ಕಂಪ್ಯೂಟರ್ ಜಾಲದಿಂದ ನಡೆಯಲಿದೆ. ಸಂದೇಶಗಳನ್ನು ನಿರ್ಧಿಷ್ಟ ಗುಂಪುಗಳಿಗೆ ಕಳುಹಿಸಬಹುದು ಮತ್ತು ಜನರು ಮುಖಾಮುಖಿ ಭೇಟಿಗಾಗಿ ಧೂರದ ಪ್ರದೇಶಗಳಿಗೆ ಪ್ರಯಾಣಿಸುವುದಕ್ಕಿಂತ ಹೆಚ್ಚು ಟೆಲಿಕಾನ್ಫರೆನ್ಸಿಂಗ್ ಅಥವಾ ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ ಭೇಟಿಯಾಗಬಹುದು.

## 4.2. ಮಾಧ್ಯಮ ಸಂಯೋಗ

ಸಂಯೋಗವು ಭವಿಷ್ಯದ ಸಂವಹನಗಳ ಹೊಸ ಸಿದ್ಧಾಂತ ಮತ್ತು ಕೇಂದ್ರೀಯ ಸಂಕೇತವನ್ನು ರೂಪಿಸುತ್ತದೆ. ವಿಭಿನ್ನ ಪ್ರಕಾರದ ಉತ್ಪಾದನೆ, ನಿರ್ವಹಣೆ, ವಿತರಣೆ ಮತ್ತು ಕಾಯಿದೆಗಳನ್ನು ಹೊಂದಿದ್ದ ದೂರ ಸಂಪರ್ಕ, ಕಂಪ್ಯೂಟರ್ ಮತ್ತು ದೃಶ್ಯ ಶ್ರವ್ಯ ತಂತ್ರಗಳ ಸಂಯೋಗ ವಿಶ್ವದಾದ್ಯಂತ ಮಾಹಿತಿ, ಮಾಧ್ಯಮ ಮತ್ತು ಸಂವಹನ ಉದ್ಯಮಗಳನ್ನು ಪರಿವರ್ತಿಸಿದೆ. ನವ ಮಾಧ್ಯಮ ಇಂಟರ್‌ನೆಟ್‌ನೊಂದಿಗೆ ಸಾಮಾನ್ಯ ಸಮಾನತೆ ಪಡೆದಿದೆ. ನವ ಮಾಧ್ಯಮ ತಂತ್ರಜ್ಞಾನ ಇತರ ಮಾಧ್ಯಮಗಳಲ್ಲಿ ಬದಲಾವಣೆಯನ್ನು ಪ್ರೋತ್ಸಾಹಿಸುತ್ತಿದೆ.

ಇಂಟರ್‌ನೆಟ್‌ನ ಲಕ್ಷಣಗಳಾದ ಏಕಾಗ್ರ ಮುಖ ಡಿಜಿಟಲ್ ಜಾಲದ ಮಾಧ್ಯಮ ತಂತ್ರಜ್ಞಾನವನ್ನು ಇಂದು ಮೊಬೈಲ್ ಫೋನುಗಳು ಮತ್ತು ಕೈಯಲ್ಲಿಡಬಹುದಾದ ವಿದ್ಯುನ್ಮಾನ ಪುಸ್ತಕ ಮತ್ತು ಡಿಜಿಟಲ್ ಟೆಲಿವಿಷನ್‌ನಿಂದ ಹಿಡಿದು ಪರ್ಯಾಯ ಮಾಧ್ಯಮಗಳ ತನಕ ವಿಭಿನ್ನ ಮಾಧ್ಯಮ ಪ್ರಕಾರಗಳಲ್ಲಿ ಕಾಣಬಹುದು. ಆನ್‌ಲೈನ್ ಆಟಗಳು ಮತ್ತು ಬೃಹತ್ ಪ್ರಮಾಣದ ಬಹು-ಆಟಗಾರ ಆನ್‌ಲೈನ್ ಆಟಗಳ ಉಗಮದಿಂದ ಡಿಜಿಟಲ್ ಮಾಧ್ಯಮ ಸಂಯೋಗ ಜಾಗತಿಕ ಕ್ರೀಡಾ ಉದ್ಯಮದ ಬೆಳವಣಿಗೆಗೆ ಕಾರಣವಾಗಿದೆ. ಸಹಕಾರದ ಮತ್ತು ಮುಕ್ತ ಪ್ರಕಟಣೆ ಹಾಗೂ ವೆಬ್‌ಬ್ಲಾಗ್‌ಗಳಂತಹ ಸಾಮಾಜಿಕ ಸಾಫ್ಟ್‌ವೇರ್‌ಗಳ ಹೊಸ ಪ್ರಕಾರಗಳು ಹುಟ್ಟಿಕೊಂಡಿವೆ.

ಅಂತರ್ಜಾಲವು ಪಠ್ಯ, ಚಿತ್ರ, ಗ್ರಾಫಿಕ್ಸ್, ಧ್ವನಿ ಮತ್ತು ದೃಶ್ಯದ ಸಂಯೋಗವನ್ನು ಸಾಧ್ಯ ಮಾಡಿವೆ. ಹೊಸ ಜಾಲತಾಣಗಳು ಈಗ ಈ ಎಲ್ಲ ಅಂಶಗಳನ್ನು ಒಟ್ಟು ಸೇರಿಸಿ ಸುದ್ದಿ ವರದಿಗಳನ್ನು ನಿರೂಪಿಸಬಹುದು. ಸುದ್ದಿ ಕೊಠಡಿಗಳಲ್ಲಿ ಈ ರೀತಿಯ ಸಂಯೋಗದ ಸಾಧ್ಯತೆಯನ್ನು ಅನೇಕರು ಭವಿಷ್ಯ ನುಡಿದಿದ್ದಾರೆ. ಅಲ್ಲಿ ವರದಿಗಾರರು ಕ್ಯಾಮರಾದ ಮುಂದೆ ಪಠ್ಯವನ್ನು ಬರೆಯುತ್ತಾ, ಧ್ವನಿ ಮುಟ್ಟಿಕೊಳ್ಳುತ್ತಾ ಮತ್ತು ವರದಿ ಮಾಡುತ್ತಿದ್ದಂತೆ, ಸಂಪಾದಕರು ಈ ಮೂರೂ ಕೆಲಸಗಳನ್ನು ಮಾಡಬಹುದು. ಆದರೆ ಒಂದು ಸುದ್ದಿಯನ್ನು ನಿರೂಪಿಸಲು ಪತ್ರಿಕೆ, ರೇಡಿಯೋ ಮತ್ತು ಟೆಲಿವಿಷನ್ ಈ ಮೂರೂ ಮಾಧ್ಯಮಗಳನ್ನು ಉಪಯೋಗಿಸುವ ಒಂದು ಸೂಕ್ತ ಪತ್ರಿಕಾ ಪ್ರಕಾರ ಇನ್ನೂ ಹುಟ್ಟಿಕೊಂಡಿಲ್ಲ. ವಿಷಯಕ್ಕೆ ತಕ್ಕಂತೆ ವಿವಿಧ ಮಾಧ್ಯಮಗಳನ್ನು ಆಯ್ಕೆ ಮಾಡಲಾಗುತ್ತದೆ. ಅಥವಾ ಮೊದಲ

ಮಾಧ್ಯಮಕ್ಕೆ ಪೂರಕವಾಗಿ ಎರಡನೆಯ ಅಥವಾ ಮೂರನೆಯ ಮಾಧ್ಯಮವನ್ನು ಉಪಯೋಗಿಸಲಾಗುತ್ತದೆ. ಒಂದು ಬಹು ಮಾಧ್ಯಮ ನಿರೂಪಣೆಯಾಗಿ ಅವುಗಳನ್ನು ಸಂಯೋಜಿಸುವ ತಾಂತ್ರಿಕ ಸಾಧ್ಯತೆ ಇದ್ದರೂ, ಸುದ್ದಿ ಜಾಲಗಳಲ್ಲಿ ಅವು ಪ್ರತ್ಯೇಕವಾಗಿ ಉಳಿಯುತ್ತದೆ.

ಸಂಯೋಗದ ಹೊರತಾಗಿ ಆನ್‌ಲೈನ್ ಮಾಧ್ಯಮದ ಒಂದು ವಿಶಿಷ್ಟ ಲಕ್ಷಣ ಹೈಪರ್‌ಲಿಂಕಿಂಗ್. ಈ ತಂತ್ರಜ್ಞಾನ ವಿಶ್ವದ ಮೂಲೆ ಮೂಲೆಗಳಿಂದ ಮಾಹಿತಿ ಸಂಗ್ರಹಿಸಿ, ಸರ್ವಾಂತರ್‌ಯಾಮಿ ರೀತಿಯಲ್ಲಿ ಗ್ರಾಹಕರಿಗೆ ಮಾಹಿತಿ ಒದಗಿಸುತ್ತದೆ. ಈಗ ಮಾಹಿತಿಯ ಬಿಲಿಯನ್ ಗಟ್ಟಲೆ ಪುಟಗಳು, ಸುದ್ದಿ ವರದಿಗಳ ಮಿಲಿಯನ್ ಗಟ್ಟಲೆ ಪುಟಗಳು ಈಗ ಆನ್‌ಲೈನ್ ಆಗಿದ್ದು, ಓದುಗ ಒಂದು ಮೌಸ್‌ಕ್ಲಿಕ್ ಮೂಲಕ ಅವುಗಳನ್ನು ಪಡೆಯಬಹುದು. ಸುದ್ದಿ ಮತ್ತು ಮಾಹಿತಿ ಅತ್ಯಂತ ವೇಗದಲ್ಲಿ ಚಲಿಸಲು ಅಂತಾರ್ಜಾಲ ಅವಕಾಶ ಕಲ್ಪಿಸಿದೆ.

## 4.3. ಸೈಬರ್ ಪತ್ರಿಕೋದ್ಯಮ

ಸೈಬರ್ ಪತ್ರಿಕೋದ್ಯಮ ಎಂದು ಕರೆಯಲ್ಪಡುವ ಆನ್‌ಲೈನ್ ಪತ್ರಿಕೋದ್ಯಮದಷ್ಟು ಯಾವುದೇ ತಾಂತ್ರಿಕ ಬೆಳವಣಿಗೆ ಪತ್ರಕರ್ತರು ತಲುಪುವ ವ್ಯಾಪ್ತಿಯನ್ನು ಬಹು ಬೇಗ ವಿಸ್ತರಿಸಿಲ್ಲ. ಪ್ರಕಟಣೆ ಸುಲಭವಾಗಿದ್ದಲ್ಲದೆ, ಸುದ್ದಿ ಮೂಲಗಳು ಮತ್ತು ಓದುಗರ ಸಂಖ್ಯೆ ಜಾಸ್ತಿಯಾಗಿದೆ. ಪ್ರಾದೇಶಿಕ ಪತ್ರಿಕೆಗಳು ಇಂದು ಇ-ಮೇಲ್ ಮೂಲಕ ದೂರದ ಸುದ್ದಿ ಮೂಲಗಳನ್ನು ಸಂಪರ್ಕಿಸಬಹುದು. ಮತ್ತು ವಿಶ್ವದಾದ್ಯಂತವಿರುವ ಮೂಲಗಳ ಜೊತೆ ಚಾಟ್ ಕೂಡಾ ಮಾಡಬಹುದು. ಆನ್‌ಲೈನ್ ಪ್ರಕಟಣೆಗಳಿಂದಾಗಿ ಅನಂತ ಪುಟವನ್ನು ಹೊಂದಿದೆ. ಅದು ವಿಶ್ವದಾದ್ಯಂತ ತಲುಪುತ್ತಿದೆ. ಆದರ ವಿಷಯಗಳು ದಿನದ ಎಲ್ಲಾ 24 ಗಂಟೆಗಳು ಹಾಗೂ ವಾರದ ಏಳು ದಿನಗಳೂ ಆನ್‌ಲೈನ್ ಆಗಿರುತ್ತದೆ.

ಬೇರೆ ದೇಶಗಳಲ್ಲಿ ಆರಂಭವಾದಂತೆ ಭಾರತದಲ್ಲಿ 1990ರ ದಶಕದಲ್ಲಿ ಪತ್ರಿಕೆಗಳು ತಮ್ಮ ಜಾಲ ಆವೃತ್ತಿಗಳನ್ನು ಆರಂಭಿಸಿದವು. 1990ರ ದಶಕದ ಕೊನೆಯಲ್ಲಿ ಹೆಚ್ಚಿನ ಇಂಗ್ಲೀಷ್ ಪತ್ರಿಕೆಗಳು ಹಾಗೂ ಅನೇಕ ಭಾಷಾ ಪತ್ರಿಕೆಗಳು ಜಾಲ ಆವೃತ್ತಿ ಹೊಂದಿದವು. ಆದಾಗ್ಯೂ ಪತ್ರಿಕೆಗಳು ಜಾಲ ಆವೃತ್ತಿಗಳನ್ನು ತಮ್ಮ ವ್ಯವಹಾರದ ಭಾಗವೆಂದು ಗಂಭೀರವಾಗಿ ಪರಿಗಣಿಸಿದ್ದು ಕೇವಲ ಕಳೆದ ಶತಮಾನದ ಕೊನೆಗೆ ಅನೇಕ ಪತ್ರಿಕೆಗಳು ಇನ್ನೂ ಕೂಡಾ ನವ ಮಾಧ್ಯಮದ ವಿಶಿಷ್ಟ ಲಕ್ಷಣವನ್ನು ಬಳಕೆ ಮಾಡುವುದು ಅಗತ್ಯವೆಂದು ಯೋಚಿಸಿಲ್ಲ. ಅವುಗಳಲ್ಲಿ ಅನೇಕ ಪತ್ರಿಕೆಗಳು ತಮ್ಮ ಮುದ್ರಿತ ಆವೃತ್ತಿಗಲ್ಲಿ ಕಾಣಿಸಿಕೊಂಡ ಸುದ್ದಿ ಮತ್ತು ಛಾಯಾಚಿತ್ರಗಳನ್ನು ಜಾಲ ಆವೃತ್ತಿಗಳಲ್ಲಿ ನೀಡಿದವು. ಆನ್‌ಲೈನ್ ಆವೃತ್ತಿಗಳ ವಿಷಯದ ನವೀಕರಣ ತುಂಬಾ ಕಡಿಮೆ ಇತ್ತು. ಅಲ್ಲಿದ್ದ ಸುದ್ದಿಗಳು ಹೆಚ್ಚಾಗಿ ಹಿಂದಿನ ದಿನದ ಸುದ್ದಿಗಳಾಗಿತ್ತು. ಕಡಿಮೆ ವೆಚ್ಚದಲ್ಲಿ ಲಭ್ಯವಾಗುವ ಅನಂತ ಪುಟದ ಬಳಕೆ ಸೇರಿದಂತೆ ಪತ್ರಿಕೆಗಳು ಜಾಲದ ಸಾಮಾರ್ಥ್ಯವನ್ನು ಪೂರ್ಣ ಬಳಕೆ ಮಾಡಿಲ್ಲ. ಪತ್ರಿಕೆಗಳು ಹೆಚ್ಚು ಹೆಚ್ಚು ಆವೃತ್ತಿಗಳನ್ನು ಆರಂಭಿಸುತ್ತಿರುವುದರಿಂದ ವಿವಿಧ ಪ್ರದೇಶಗಳ ಸುದ್ದಿ ರಾಜ್ಯದೊಳಗೇ ಎಲ್ಲಾ ಜನರನ್ನು ತಲುಪುತ್ತಿಲ್ಲ.

ಆನ್‌ಲೈನ್ ಮಾಧ್ಯಮದ ಪ್ರವೇಶದಿಂದ ಮಾಧ್ಯಮಗಳ ಧ್ವಾರ ಪಾಲನಾ ಕೆಲಸ ನಾಶವಾಗಿದೆ. ಆದಾಗ್ಯೂ ಎಲ್ಲಿ ಧ್ವಾರ ಪಾಲನಾ ಕಾರ್ಯ ಹಾಗೂ ಕೆಲವು ವಿಧಧ ಅಂತರ್ ಪರಿಶೀಲನೆ ಮತ್ತು ಪರಿಶೋಧನೆ ಇರುತ್ತದೋ ಅಲ್ಲಿ ಪತ್ರಿಕೋದ್ಯಮ ಅಸ್ತಿತ್ವದಲ್ಲಿರುತ್ತದೆ. ಹೊಸ ತಂತ್ರಜ್ಞಾನ ಖಂಡಿತವಾಗಿಯೂ ಮಾಧ್ಯಮಗಳ ಕಾರ್ಯಸೂಚಿ ನಿರ್ಮಾಣ ಸಾಮರ್ಥ್ಯಗಳನ್ನು ನಾಶಮಾಡಿದೆ. ಯಾಕೆಂದರೆ ಓದುಗರು ವಿವಿಧ ಸುದ್ದಿ ಮೂಲಗಳನ್ನು ಮುಖ್ಯವಾಗಿ ಜಾಲದಲ್ಲಿರುವ ಪ್ರಾಥಮಿಕ ಮೂಲಗಳನ್ನು ನೇರವಾಗಿ ನೋಡುತ್ತಾರೆ. ಓದುಗರು ಸುದ್ದಿಯ ನಿರೂಪಣೆ ಬಿಟ್ಟು, ವಿವಿಧ ದಾರಿಗಳನ್ನು ಅನುಸರಿಸಲು ಹೈಪರ್‌ಲಿಂಕ್‌ಗಳು ಅವಕಾಶ ಮಾಡಿಕೊಡುತ್ತವೆ.

ಇಂದು ಪತ್ರಿಕೋದ್ಯಮದ ಹೊಸ ಪ್ರಕಾರಗಳಿಗೆ ನೈತಿಕತೆಯ ಹೊಸ ದಾರಿಗಳ ಅಗತ್ಯವಿದೆ. ಕಾರ್ಪೋರೇಟ್ ಮಾಧ್ಯಮಗಳ ಹೆಚ್ಚುತ್ತಿರುವ ಕ್ರೋಢೀಕರಣ ಹಾಗೂ ಇಂಟರ್‌ನೆಟ್‌ನ ಮುಂದುವರಿದ ವಿಕಾಸ ಸೈಬರ್ ಪತ್ರಿಕೋದ್ಯಮದ ನೈತಿಕತೆಯನ್ನು ಇನ್ನಷ್ಟು ಜಟಿಲ ಮಾಡಿದೆ. ಖಾಸಗೀತನದ ಕ್ಷೇತ್ರಗಳು, ಜಾಹೀರಾತು/ವ್ಯವಹಾರ ಸಂಬಂಧಗಳು, ಗ್ರಂಥಸ್ವಾಮ್ಯ ಹಕ್ಕು, ಉಪಾಧಿಗಳು, ಸಂಪರ್ಕ,

ಪೂರಕ ವಿಷಯಗಳ ರವಾನೆ, ಶೀಘ್ರತೆ, ಅಂಕಿ ಅಂಶಗಳ ಮತ್ತು ಗ್ರಾಫಿಕ್ಸ್ ಚಿತ್ರಗಳ ಪರಿವರ್ತನೆ, ಸಮುದಾಯ ಪ್ರಕಟಣೆ ಮತ್ತು ಅಪಾಯಕಾರಿ ಅಂಶ ಈ ವಿಷಯಗಳು ಸೇರಿದಂತೆ ಸೈಬರ್ ಪತ್ರಿಕೋದ್ಯಮ ಅನೇಕ ನೈತಿಕ ವಿಷಯಗಳ ಸವಾಲೊಡ್ಡಿದೆ.

## 4.4. ಮಾಧ್ಯಮಗಳಲ್ಲಿ ವಿದೇಶಿ ನೇರ ಹೂಡಿಕೆ

2002ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಮುದ್ರಣಾ ಮಾಧ್ಯಮದಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ)ಗೆ ಅವಕಾಶ ನೀಡಲು ನಿರ್ಧರಿಸಿತು. ಕೇಂದ್ರ ಸರಕಾರದ ಈ ನಿರ್ಧಾರ ದೇಶದಲ್ಲಿ 47 ವರ್ಷಗಳ ತನಕ ಇದ್ದ ಕಠಿಣ ಧೋರಣೆಯನ್ನು ಬದಲಾಯಿಸಿತು. ಆ ಧೋರಣೆ 1955ರ ಸಂಪುಟ ನಿರ್ಣಯ ಆಧಾರಿತವಾಗಿತ್ತು. ಅದು ದೇಶದಲ್ಲಿ ವಿದೇಶಿ ಒಡೆತನದ ಪತ್ರಿಕೆಗಳು ಮತ್ತು ನಿಯತ ಕಾಲಿಕೆಗಳ ಪ್ರಕಟಣೆಯನ್ನು ನಿಷೇಧಿಸಿತ್ತು. ಆ ನಿಷೇಧ ಮುಖ್ಯವಾಗಿ ಸುದ್ದಿ ಮತ್ತು ಪ್ರಚಲಿತ ವಿದ್ಯಾಮಾನಗಳಿಗೆ ಸಂಬಂಧಿಸಿದ ಪ್ರಕಟಣೆಗಳಿಗೆ ಅನ್ವಯವಾಗುತ್ತಿತ್ತು. ಸಂಪುಟ ನಿರ್ಣಯವು 1952ರಲ್ಲಿ ತನಿಖಾ ಆಯೋಗ ಕಾಯಿದೆ ಮೂಲಕ ನೇಮಕಗೊಂಡ ಪ್ರಥಮ ಪತ್ರಿಕಾ ಆಯೋಗದ ಶಿಫಾರಸ್ಸುಗಳ ಆಧಾರಿತವಾಗಿತ್ತು. ನ್ಯಾಯಾಧೀಶ ಜಿ. ಎಸ್. ರಾಜಾಧ್ಯಕ್ಷ ನೇತೃತ್ವದ 11 ಸದಸ್ಯರ ಆಯೋಗ 1954ರಲ್ಲಿ ತನ್ನ ವರದಿ ಸಲ್ಲಿಸಿತು. ಅದು ದೇಶದಲ್ಲಿರುವ ಪತ್ರಿಕಾ ಉದ್ಯಮದ ನಿಯಂತ್ರಣ, ನಿರ್ವಹಣೆ ಮತ್ತು ಒಡೆತನ, ಹಣಕಾಸಿನ ರಚನೆ ಮತ್ತು ಇತರ ಪ್ರಮುಖ ವಿಷಯಗಳನ್ನು ವಿವರವಾಗಿ ಪರಿಶೀಲಿಸಿತು. ಅದು ದಿನಪತ್ರಿಕೆ ಮತ್ತು ವಾರಪತ್ರಿಕೆಗಳಲ್ಲಿ ವಿದೇಶಿ ಒಡೆತನ ಹಿತಾಸಕ್ತಿಗಳ ವಿರುದ್ಧವಾದ ಅಭಿಪ್ರಾಯವನ್ನು ಮಂಡಿಸಿದೆ.

ಮುದ್ರಣ ಮಾಧ್ಯಮದ ಮೇಲಿನ ಹೊಸ ಧೋರಣೆ ವಿದೇಶಿ ನೇರ ಹೂಡಿಕೆಯ ದೊಡ್ಡ ಧೋರಣೆಯ ಭಾಗವಾಗಿದೆ. ಅದು ದೇಶೀಯ ರಚನೆಗಳು ಉಪಕರಣ ಹಾಗೂ ಸಂಸ್ಥೆಗಳಲ್ಲಿ ವಿದೇಶಿ ಬಂಡವಾಳ ಮತ್ತು ಇತರ ಆಸ್ತಿಗಳ ಹೂಡಿಕೆಗೆ ಅವಕಾಶ ಮಾಡಿದೆ. 1991ರಲ್ಲಿ ಆರಂಭಗೊಂಡ ಆರ್ಥಿಕ ಸುಧಾರಣೆಗಳ ಭಾಗವಾಗಿ ಅನೇಕ ಕ್ಷೇತ್ರಗಳನ್ನು ವಿದೇಶಿ ಹೂಡಿಕೆಗೆ ತೆರೆಯಲಾಗಿದೆ. ಮಾಧ್ಯಮಗಳ ಸನ್ನಿವೇಶದಲ್ಲಿ ಗಮನಾರ್ಹವಾದುದು ಟೆಲಿವಿಷನ್, ಜಾಹೀರಾತು ಮತ್ತು ಚಲನಚಿತ್ರ.

2002 ರಲ್ಲಿ ನಿಗದಿಪಡಿಸಿದಂತೆ ಸುದ್ದಿ ಮತ್ತು ಪ್ರಚಲಿತ ವಿದ್ಯಮಾನಗಳ ಮುದ್ರಣ ಮಾಧ್ಯಮಗಳಲ್ಲಿ ಶೇ. 26ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆ ನಿರ್ಣಯ ಹಾಗೆಯೇ ಉಳಿದಿದೆ. ಆದಾಗ್ಯೂ, 2005ರಲ್ಲಿ ಕೇಂದ್ರ ಸಂಪುಟ ಶೇ.26ರಷ್ಟು ಬಂಡವಾಳ ಉಳಿಸಿಕೊಂಡು ಹೆಚ್ಚು ನಮ್ಯವಾದ ಧೋರಣೆ ಪರಿಚಯಿಸಲು ನಿರ್ಧರಿಸಿತು. ಇದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವರು ಸಂಪುಟದಲ್ಲಿ ಮಂಡಿಸಿದ ಮುದ್ರಣ ಮಾಧ್ಯಮ ಧೋರಣೆ ಬದಲಾವಣೆಗಳ ಒಂದು ಪ್ಯಾಕೇಜಿನ ಭಾಗವಾಗಿದೆ. ಅದರಂತೆ ಅನಿವಾಸಿ ಭಾರತೀಯರು, ಸಾಗರದಾಚೆಯ ಕಾರ್ಪೋರೇಟ್ ಸಂಸ್ಥೆಗಳು ಮತ್ತು ಭಾರತೀಯ ಮೂಲದ ವ್ಯಕ್ತಿಗಳಿಂದ ಹೂಡಿಕೆ ಮತ್ತು ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಇಲಾಖಾ ಹೂಡಿಕೆಗಳಿಗೆ ಅನುಮತಿ ನೀಡಲಾಗಿದೆ.

ಜಾಹೀರಾತು ಮತ್ತು ಚಲನಚಿತ್ರಗಳಲ್ಲಿ ಶೇ. 74 ಬಂಡವಾಳ ಹೂಡಿಕೆಯನ್ನು ನಿಧಾನವಾಗಿ ತೆಗೆದುಹಾಕಿ, ಶೇ. 100ರಷ್ಟು ಬಂಡವಾಳ ಹೂಡಿಕೆಗೆ ಅವಕಾಶ ನೀಡಲಾಗಿದೆ. ಇತ್ತೀಚೆಗೆ ಎಫ್.ಎಂ. ರೇಡಿಯೋ ಪ್ರಸಾರದಲ್ಲಿ ಶೇ. 200ರಷ್ಟು ನೇರ ಹೂಡಿಕೆಗೆ ಅವಕಾಶ ನೀಡಲಾಗಿದೆ. ಇನ್ನೊಂದೆಡೆ ಕೇಬಲ್, ಡಿಟಿಎಚ್ ಪ್ರಸಾರ ಮತ್ತು ಅಪ್‌ಲಿಂಕಿಂಗ್‌ಗಳಲ್ಲಿ ಶೇ. 49ರಷ್ಟು ಬಂಡವಾಳ ಹೂಡಿಕೆಗೆ ಅವಕಾಶ ನೀಡಲಾಗಿದೆ.

ಮುದ್ರಣ ಮಾಧ್ಯಮದ ಮೇಲೆ ವಿದೇಶಿ ನೇರ ಹೂಡಿಕೆಯ ಪ್ರಭಾವ ಹಾಗೂ ಪತ್ರಿಕಾ ಉದ್ಯಮದಲ್ಲಿ ಒಟ್ಟಾಗಿ ಅದರ ಭವಿಷ್ಯದ ಪರಿಣಾಮದ ಬಗೆಗೆ ಸ್ಪಷ್ಟವಾಗಿ ಇನ್ನೂ ತಿಳಿಸಿದಿಲ್ಲ. ಆದರೆ ಬಹುರಾಷ್ಟ್ರೀಯ ಕಂಪನಿಗಳು ಮತ್ತು ರಾಷ್ಟ್ರದಾಚೆಯ ಕಂಪನಿಗಳು ತಮ್ಮ ಸಂಸ್ಥೆಗಳನ್ನು ಬೆಂಬಲಿಸಲು ಪತ್ರಿಕೆಗಳನ್ನು ಖರೀದಿಸಬಹುದು ಅಥವಾ ಪ್ರಭಾವಶಾಲಿ ಮುದ್ರಣ ಸಂಸ್ಥೆಗಳನ್ನು ಸ್ಥಾಪಿಸಬಹುದು ಎಂಬ ಸೂಚನೆಗಳಿವೆ. ರಾಜಕೀಯ ಮತ್ತು ಆರ್ಥಿಕ ಅಸ್ಥಿರತೆಯಿಂದ ಬಳಲುತ್ತಿರುವ ಅನೇಕ ತೃತೀಯ ಜಗತ್ತಿನ ರಾಷ್ಟ್ರಗಳಿಗಿಂತ